ಉದಯ ವಾಹಿನಿ
ಪ್ರಾದೇಶಿಕ
ಬುಧವಾರ
10 ಜೂನ್ 2026
03

# ಜಿಲ್ಲಾಧಿಕಾರಿ ಆದೇಶ ಉಲ್ಲಂಘನೆ : 06 ಟಿಪ್ಪರ್‌ಗಳು ಪೊಲೀಸರ ವಶ

• ಉದಯವಾಹಿನಿ, ಗುಂಡ್ಲುಪೇಟೆ



'ಶಾಲಾ ಅವಧಿಯಲ್ಲಿ ಟಿಪ್ಪರ್ ಲಾರಿಗಳ ಸಂಚಾರವನ್ನು ನಿಷೇಧಿಸಿ ಜಿಲ್ಲಾಧಿಕಾರಿ ಶ್ರೀರೂಪ ಅವರು ಆದೇಶ ಹೊರಡಿಸಿದ್ದರೂ ಸಹ ನಿಯಮವನ್ನು ಗಾಳಿಗೆ ತೂರಿ ಸಂಚರಿಸುತ್ತಿದ್ದ 06 ಟಿಪ್ಪರ್ ಲಾರಿಗಳನ್ನ ಪಟ್ಟಣ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಕ್ಕಳ ಸುರಕ್ಷತಾ ಹಿತದೃಷ್ಟಿಯಿಂದ ಜಿಲ್ಲಾಧಿಕಾರಿಗಳು ಜಿಲ್ಲೆಯಾದ್ಯಂತ ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲಾ ಪರಿಮಿತಿ 200 ಮೀಟರ ಒಳಗೆ ವಿದ್ಯಾರ್ಥಿಗಳು ಆಗಮಿಸುವ ವೇಳೆ ಬೆಳಗ್ಗೆ 08 ಗಂಟೆಯಿಂದ 10.30 ಶಾಲೆಯಿಂದ ನಿರ್ಗಮಿಸುವ ವೇಳೆ 3.30 ರಿಂದ ಸಂಜೆ 5.30 ರ ತನಕ ಷರತ್ತು ವಿಧಿಸುವ ಜೊತೆಗೆ ಟಿಪ್ಪರ್ ಲಾರಿಗಳ ಸಂಚಾರಕ್ಕೆ ತಾತ್ಕಾಲಿಕವಾಗಿ ನಿರ್ಬಂಧ ಹೇರಿ ಆದೇಶಿಸಲಾಗಿತ್ತು ಒಂದು ವೇಳೆ ನಿಯಮ ಉಲ್ಲಂಘಿಸಿದ್ದೆಯಾದಲ್ಲಿ ಅಂತಹ ಟಿಪ್ಪರ್ ಚಾಲಕರುಗಳನ್ನ ವಶಕ್ಕೆ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದು ಕಠಿಣ ಎಚ್ಚರಿಕೆ ನೀಡಿದ್ದರೂ ಸಹ ಉದ್ಧಟತನ ತೋರಿದ ಲಾರಿಗಳನ್ನ ವಶಕ್ಕೆ ಪಡೆದು ಬಿಸಿ ಮುಟ್ಟಿಸಿದ್ದಾರೆ. ಮಂಗಳವಾರ ಬೆಳಗ್ಗೆ 8.10ರಲ್ಲಿ ಕೆಎಸ್ ಆರ್ ಟಿಸಿ ಬಸ್ ನಿಲ್ದಾಣ ಮುಖ್ಯ ರಸ್ತೆಯ ದೊಡ್ಡಹುಂಡಿ ಭೋಗಪ್ಪ ಹಾಗೂ ಮದ್ದಾನೇಶ್ವರ ಶಾಲಾ ಮುಂಭಾಗ ಸಂಚರಿಸುತ್ತಿದ್ದ 06 ಟಿಪ್ಪರ್ ಲಾರಿಗಳನ್ನ ಜಿಲ್ಲಾಧಿಕಾರಿಗಳ ಆದೇಶದಂತೆ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶಾಲಾ ಮಕ್ಕಳ ಸುರಕ್ಷತಾ ಹಿತದೃಷ್ಟಿಯಿಂದ ಕಾರ್ಯಚರಣೆ ನಡೆಸಿದ ಪಿಐ ಜಯಕುಮಾರ್ ಮತ್ತು ತಂಡಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಪ್ರಶಂಸನೆ ವ್ಯಕ್ತಪಡಿಸಿದ್ದಾರೆ.

### ಪೊಲೀಸರು ಕಠಿಣ ಕ್ರಮಕ್ಕೆ ಮುಂದಾಗಲಿ

ಪಟ್ಟಣದಲ್ಲಿ ಎಗ್ಗಿಲ್ಲದೆ ಸಂಚರಿಸುವ ಟಿಪ್ಪರ್ ಲಾರಿಗಳಿಂದ ಸಂಭವಿಸುತ್ತಿದ್ದ ಅಪಘಾತ ಪ್ರಕರಣ, ರಸ್ತೆ ಸಂಚಾರ ಅಸ್ತವ್ಯಸ್ತ ಇನ್ನಿತರ ಸಮಸ್ಯೆಗಳಿಗೆ ಅಲ್ಪಕಾಲಿಕ ಪರಿಹಾರ ಕಂಡುಕೊಳ್ಳಲು ಸೀಮಿತ ಅವಧಿಯ ನಿರ್ಬಂಧಕ್ಕೆ ಜಿಲ್ಲಾಧಿಕಾರಿಗಳು ಆದೇಶಿಸಿದ್ದರೂ ಸಹ ನಿಯಮ ಪಾಲನೆಯಾಗದಿರುವುದು ನಾಚಿಕೆಗೇಡು, ನಿರ್ಬಂಧದ ಸಮಯದಲ್ಲೂ ಎಂಸ್ಯಾನ್ಡ್, ಬಿಳಿಕಲ್ಲು ಹೊತ್ತು ಸಾಗುವ ಟಿಪ್ಪರ್‌ಗಳಿಗೆ ವ್ಯವಹಾರವೇ ಮೊದಲಾದರೆ ಜಿಲ್ಲಾಧಿಕಾರಿಗಳ ಸೂಚನೆಗೆ ತಕ್ಕಂತೆ ಪೊಲೀಸರು ಕಠಿಣ ಕ್ರಮಕ್ಕೆ ಮುಂದಾಗಬೇಕು.

# ಮೈಸೂರಲ್ಲಿ ಟ್ರಾಫಿಕ್ ರೂಲ್ಸ್ ಉಲ್ಲಂಘನೆ, 642 ಕೋಟಿ ಫೈನ್ ಬಾಕಿ: ದಂಡ ಪಾವತಿಗೆ 50% ಡಿಸ್ಕೌಂಟ್!

• ಉದಯವಾಹಿನಿ, ಮೈಸೂರು

ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಸಂಬಂಧ ವಾಹನ ಸವಾರರಿಂದ 642 ಕೋಟಿ ರೂ. ದಂಡ ವಸೂಲಿಯಾಗಬೇಕಿದೆ. ಮೈಸೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ 1.4 ಕೋಟಿ ಪ್ರಕರಣಗಳಿದ್ದು, 458 ಕೋಟಿ ರೂ. ದಂಡ ಪಾವತಿಯಾಗಬೇಕಿದೆ. ಮೈಸೂರು ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ 36.73 ಲಕ್ಷ ಪ್ರಕರಣಗಳಿಂದ 184 ಕೋಟಿ ರೂ. ದಂಡ ವಸೂಲಿಯಾಗಬೇಕಿದೆ,ಎಂದು ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಹೇಳಿದರು.

ಇದರೊಂದಿಗೆ ಸಾರಿಗೆ ಇಲಾಖೆಯ ಮೈಸೂರು ಪಶ್ಚಿಮ ಸಾರಿಗೆ ಕಚೇರಿ ವ್ಯಾಪ್ತಿಯಲ್ಲಿ 792 ಪ್ರಕರಣಗಳಿಂದ 24 ಲಕ್ಷ ರೂ. ಹಾಗೂ ಹುಣಸೂರು ಆರ್‌ಟಿಒ ವ್ಯಾಪ್ತಿಯಲ್ಲಿ 864 ಪ್ರಕರಣಗಳಿದ್ದು, 30 ಲಕ್ಷ ರೂ. ದಂಡ ಸೇರಿ ಒಟ್ಟು 55 ಲಕ್ಷ ರೂ. ದಂಡ ಸಂಗ್ರಹವಾಗಬೇಕಿದೆ.

ಪೊಲೀಸ್ ಇಲಾಖೆಯ ಮೇ 2026ರ ಮೊದಲು ಪ್ರಕರಣಗಳು ಮತ್ತು ಸಾರಿಗೆ ಇಲಾಖೆಯ 1991 ರಿಂದ 2022ರ ಅವಧಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲಾಗಿ ಬಾಕಿ ಇರುವ ಪ್ರಕರಣಗಳ ಮೊತ್ತದಲ್ಲಿ ಶೇ.50 ರಿಯಾಯಿತಿ ದಂಡ ಪಾವತಿಯನ್ನು ವಾಹನ ಸವಾರರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಮುಂದುವರೆದು, ಈ ಹಿಂದೆ 77 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸಿ 210 ಕೋಟಿ ರೂ. ಸರಕಾರಕ್ಕೆ ಆದಾಯ ಬಂದಿದೆ. ನಾಗರಿಕರು ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕು. ರಾಜ್ಯದಲ್ಲಿ ಬಾಕಿ ದಂಡ ವಸೂಲಿಯಲ್ಲಿ 2ನೇ ಸ್ಥಾನದಲ್ಲಿರುವ ಮೈಸೂರು ಜಿಲ್ಲೆಯನ್ನು ಮೊದಲ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಬೇಕಿದ್ದು, ಮೈಸೂರಿನ ಜಿಲ್ಲಾ ನ್ಯಾಯಾಲಯಗಳ ಆವರಣದಲ್ಲಿ ಬಾಕಿ ದಂಡ ಪಾವತಿ ವಸೂಲಿ ಕೇಂದ್ರ ಆರಂಭಿಸಿ ಎಂದು ಪೊಲೀಸರಿಗೆ ಸೂಚಿಸಿದರು. ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, 'ಠಾಣೆ ಮಟ್ಟದಲ್ಲಿ ಮನೆ ಮನೆಗೆ ಪೊಲೀಸ್ ವ್ಯವಸ್ಥೆ ಇದೆ. ಪೊಲೀಸರು ಮನೆ ಮನೆಗೆ ಭೇಟಿ ನೀಡಿ ಬಾಕಿ ದಂಡ ಪಾವತಿಸುವಂತೆ ಅರಿವು ಮೂಡಿಸಲಿದ್ದಾರೆ.



ಸಾಮಾಜಿಕ ಜಾಲತಾಣ, ಹಳ್ಳಿಗಳಲ್ಲಿ ಢಂಗೂರ ಸಾರಿಸುತ್ತೇವೆ. ನಾಗರಿಕರು ತಮ್ಮ ವಾಹನದ ಸಂಖ್ಯೆಯನ್ನು ಹಾಕಿದರೆ ಎಷ್ಟು ದಂಡ ಬಾಕಿ ಇದೆ ಎಂಬುದನ್ನು ಸುಲಭವಾಗಿ ತಿಳಿಯಬಹುದಾಗಿದೆ, ಎಂದು ತಿಳಿಸಿದರು. ನಗರ ಪೊಲೀಸ್ ಸಂಚಾರ ವಿಭಾಗದ ಡಿಸಿಪಿ ಸುಂದರ್ ರಾಜ್ ಮಾತನಾಡಿ, ಮೈಸೂರು ನಗರದಲ್ಲಿ 18 ಠಾಣೆಗಳು, 8 ಸಂಚಾರ ಠಾಣೆಗಳಿವೆ. ಹಿಂದೆ ಶೇ. 20 ಬಾಕಿ ದಂಡ ವಸೂಲಿಯಾಗಿದೆ. ಶೇ. 80 ದಂಡ ವಸೂಲಿ ಮಾಡಬೇಕಿದೆ. ದಂಡ ವಸೂಲಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತೇವೆ, ಎಂದು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಾಗರಾಜ ಸಿದ್ದಪ್ಪ ಅಂಕನದೊಡ್ಡಿ, ವಕೀಲರ ಸಂಘದ ಅಧ್ಯಕ್ಷ ಎಸ್ ಲೋಕೇಶ್ ಇದ್ದರು.

ಬಾಕಿ
ದಂಡ ಪಾವತಿ
ವಸೂಲಿ



### ರಾಜ್ಯ ಸರ್ಕಾರದಿಂದ ಅಧಿಸೂಚನೆ

ಸಂಚಾರ ನಿಯಮ ಉಲ್ಲಂಘನೆ ಮತ್ತು ಸಾರಿಗೆ ಇಲಾಖೆ ಸಂಬಂಧ ದಂಡ ಪಾವತಿಗೆ ಶೇ.50ರಷ್ಟು ರಿಯಾಯಿತಿಯನ್ನು ಸರ್ಕಾರ ನೀಡಿದೆ. ಮೇ 2026ರ ಮೊದಲು ದಾಖಲಾಗಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಹಾಗೂ 1991ರಿಂದ 2022ರ ಅವಧಿಯಲ್ಲಿ ಸಾರಿಗೆ ಇಲಾಖೆಯಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ದಂಡದಲ್ಲಿ ಶೇ.50 ರಿಯಾಯಿತಿ ನೀಡುವ ಕುರಿತು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

### ಯೋಜನೆ ರೂಪಿಸುವಂತೆ ಸೂಚನೆ

ರಿಯಾಯಿತಿಯಡಿ ದಂಡ ಪಾವತಿಗೆ ಸ್ಥಾಪಿಸಿರುವ ಬೂತ್‌ಗಳ ಬಗ್ಗೆ ಪ್ರಚಾರ ನೀಡಬೇಕು. ಆ ಮೂಲಕ ಹೆಚ್ಚಿನ ಸಂಖ್ಯೆ ಯಲ್ಲಿ ಪ್ರಕರಣಗಳನ್ನು ಮುಕ್ತಾಯಗೊಳಿಸಬಹುದು. ಹಾಗೆಯೇ ತಾಲ್ಲೂಕು ಅಧಿಕಾರಿಗಳು ಪ್ರತ್ಯೇಕ ಸಭೆ ನಡೆಸಿ ಕ್ರಿಯಾ ಯೋಜನೆ ರೂಪಿಸುವಂತೆ ಸೂಚನೆ ನೀಡಿದರು.

### ಜಿಲ್ಲೆಯಲ್ಲಿ ಬಾಕಿ ಇರುವ ಪ್ರಕರಣ ವಿವರ

ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಸಂಬಂಧ ವಾಹನ ಸವಾರರಿಂದ 642 ಕೋಟಿ ರೂ. ದಂಡ ವಸೂಲಿಯಾಗಬೇಕಿದೆ. ಮೈಸೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ 1.4 ಕೋಟಿ ಪ್ರಕರಣಗಳಿದ್ದು, 458 ಕೋಟಿ ರೂ. ದಂಡ ಪಾವತಿಯಾಗಬೇಕಿದೆ. ಮೈಸೂರು ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ 36.73 ಲಕ್ಷ ಪ್ರಕರಣಗಳಿಂದ 184 ಕೋಟಿ ರೂ. ದಂಡ ವಸೂಲಿಯಾಗಬೇಕಿದೆ. ಈ ಹಿಂದೆ 77 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸಿ 210 ಕೋಟಿ ರೂ. ಸರಕಾರಕ್ಕೆ ಆದಾಯ ಬಂದಿದೆ. ನಾಗರಿಕರು ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕು. ರಾಜ್ಯದಲ್ಲಿ ಬಾಕಿ ದಂಡ ವಸೂಲಿಯಲ್ಲಿ 2ನೇ ಸ್ಥಾನದಲ್ಲಿರುವ ಮೈಸೂರು ಜಿಲ್ಲೆಯನ್ನು ಮೊದಲ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಬೇಕಿದ್ದು, ಮೈಸೂರಿನ ಜಿಲ್ಲಾ ನ್ಯಾಯಾಲಯಗಳ ಆವರಣದಲ್ಲಿ ಬಾಕಿ ದಂಡ ಪಾವತಿ ವಸೂಲಿ ಕೇಂದ್ರ, ಆರಂಭಿಸಿ ಎಂದು ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ನಿರ್ದೇಶನ ನೀಡಿದ್ದಾರೆ.

# 3 ಕೋಟಿ ವೆಚ್ಚದ ನಾಗರಭಾವಿ ದೇವಕೊಂಡಹಳ್ಳಿ ಸಿ.ಸಿ. ರಸ್ತೆ ಕಾಮಗಾರಿಗೆ ಶಾಸಕ ಪ್ರದೀಪ್ ಈಶ್ವರ್ ಅವರಿಂದ ಚಾಲನೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಮಂಚೇನಹಳ್ಳಿ ಮತ್ತು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರಗಳ ಸಮಗ್ರ ಅಭಿವೃದ್ದಿಗೆ ಪ್ರಥಮ ಆದ್ಯತೆ ನೀಡಲಾಗುವುದು ಎಂದು ಶಾಸಕ ಪ್ರದೀಪ್ ಈಶ್ವರ್ ಹೇಳಿದರು. ತಾಲ್ಲೂಕಿನ ಹಳೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭಾಗದ ಗ್ರಾಮಗಳಾದ ನಾಗರಬಾವಿ ಯಿಂದ ದೇವರಕೊಂಡಹಳ್ಳಿಗೆ ಸಂಪರ್ಕ ಕಲ್ಪಿಸುವ ಸುಮಾರು 3 ಕೋಟಿ ವೆಚ್ಚದ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುವ ಮೂಲಕ



ಅಧಿಕೃತವಾಗಿ ಚಾಲನೆ ನೀಡಿ ಮಾತನಾಡಿದರು. ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡುವ ಮುನ್ನ ಬೆಳಂಬೆಳಗ್ಗೆಯೇ ದಲಿತರೇ ಹೆಚ್ಚಾಗಿ ವಾಸಿಸುವ ನಾಗರಬಾವಿ ಮತ್ತು ದೇವರಕೊಂಡಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿದ್ದ ಶಾಸಕ ಪ್ರದೀಪ್ ಈಶ್ವರ್ ಅವರು ಗ್ರಾಮಗಳಲ್ಲಿ ಸಂಚರಿಸಿ ಜನರಿಂದ ಅಹವಾಲು ಆಲಿಸಿದರು.

ಗ್ರಾಮದ ಪ್ರತಿಯೊಂದು ಮನೆ ಮನೆಗೂ ಭೇಟಿ ನೀಡಿದ್ದ ಶಾಸಕರು ಅವರ ಮನೆಯ ಬಳಿಯೇ ಅವರಿಂದ ಅಹವಾಲುಗಳನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರಲ್ಲಿ ಒಂದಷ್ಟು ಮಂದಿ ಪಡಿತರ ಚೀಟಿ ಸಮಸ್ಯೆ ಪರಿಹರಿಸಿ (ರೇಷನ್ ಕಾರ್ಡ್), ಪಿಂಚಣಿ ಸೌಲಭ್ಯ ಒದಗಿಸಿ, ಕುಡಿಯುವ ನೀರಿನ ತೊಂದರೆ ಪರಿಹಾರದ ಮಾರ್ಗೋಪಾಯ ತೋರಿ, ಶಾಲಾ ಮಕ್ಕಳಿಗೆ ಆಟದ ಮೈದಾನದ ಸಮಸ್ಯೆಯಿದೆ.

ಅದನ್ನು ಪರಿಹರಿಸಿ, ಮಳೆಗಾಲ ಶುರುವಾಗಿದೆ ವಸತಿಯಿಲ್ಲದವರಿಗೆ ಸೂರು ನೀಡಿ ಪುಣ್ಯಕಟ್ಟಿಕೊಳ್ಳಿ, ನಮ್ಮ ಮಕ್ಕಳಿಗೆ ಹಾಸ್ಟೆಲ್‌ನಲ್ಲಿ ಸೇರಿಸಲು ಸಮಸ್ಯೆಯಿದೆ. ಅದನ್ನು ಪರಿಹರಿಸಿ ಎಂದು ಮನವಿ ಮಾಡಿದರು. ಇನ್ನೊಂದಷ್ಟು ಮಂದಿ ಸರ್ಕಾರದ ವಸತಿ ಯೋಜನೆಗಳಿಗೆ ಸಂಬಂಧಿಸಿದಂತೆ ತಮಗಿರುವ ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತಂದರು. ಗ್ರಾಮಸ್ಥರ ಅಹವಾಲುಗಳನ್ನು ಅತ್ಯಂತ ತಾಳ್ಮೆಯಿಂದ ಆಲಿಸಿದ ಶಾಸಕರು, ಸ್ಥಳದಲ್ಲಿದ್ದ ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ, ಆಹಾರ ಪೂರೈಕೆ ಶಿರಸ್ಥೇದಾರ್, ಕಂದಾಯ,ಅರಣ್ಯ ಇಲಾಖೆ ಸೇರಿ 33 ಇಲಾಖೆ ಅಧಿಕಾರಿಗಳಿಗೆ ಪರಿಹಾರ ಮಾಡುವಂತೆ ಸೂಚನೆ ನೀಡಿದರು.

ಪಿಂಚಣಿ, ಹಾಸ್ಟೆಲ್ ಸಮಸ್ಯೆ, ಪಡಿತರ ಸಮಸ್ಯೆ,ಕುಡಿಯುವ ನೀರು ಸೇರಿ ಹಲವು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಿಕೊಟ್ಟರು.

## ಚನ್ನಪಟ್ಟಣದಲ್ಲಿ ಚಿರತೆ ದಾಳಿ, ಕರು ಸಾವು; ಅರಣ್ಯ ಇಲಾಖೆ ಪರಿಶೀಲನೆ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ವಿರುಪಾಕ್ಷಿಪುರ ಹೋಬಳಿಯ ಹುಚ್ಚಯ್ಯನದೊಡ್ಡಿ ಗ್ರಾಮದಲ್ಲಿ ಭಾನುವಾರ ತಡರಾತ್ರಿ ಚಿರತೆ ದಾಳಿ ನಡೆಸಿ ಸೀಮೆ ಹಸುವಿನ ಕರುವನ್ನು ಕೊಂದು ಹಾಕಿದೆ.

ಗ್ರಾಮದ ರೈತ ದಂಪತಿ ಭಾಗ್ಯ ಪುಟ್ಟಲಿಂಗೇಗೌಡ ಅವರು ತಮ್ಮ ಮನೆಯ ಹಿಂಭಾಗದ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಸೀಮೆ ಹಸುವಿನ ಕರುವಿನ ಮೇಲೆ ಚಿರತೆ ದಾಳಿ ನಡೆಸಿದೆ. ಕರು ಸ್ಥಳದಲ್ಲೇ ಸಾವನ್ನಪ್ಪಿದೆ. ವಿಷಯ ತಿಳಿದು ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹೈನುಗಾರಿಕೆ ನಂಬಿ ಜೀವನ ಸಾಗಿಸುತ್ತಿದ್ದ ರೈತ ದಂಪತಿ ಈಗ ಒಂದು ವರ್ಷ ವಯಸ್ಸಿನ ಸೀಮೆ ಹಸುವಿನ ಕರುವನ್ನು ಕಳೆದುಕೊಂಡು ಕಂಗಾಲಾಗಿದೆ. ಕುಟುಂಬಕ್ಕೆ ಪರಿಹಾರ ನೀಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಕಾರಂಜಿ ಕೆರೆ ಅಂಗಳದಲ್ಲಿ ಪರಿಸರ ಅನುಭವ ವಲಯ ನಿರ್ಮಾಣಕ್ಕೆ ಚಾಲನೆ

• ಉದಯವಾಹಿನಿ, ಮೈಸೂರು

ಇಲ್ಲಿನ ಕಾರಂಜಿ ಕೆರೆ ಪ್ರಕೃತಿ ಉದ್ಯಾನದಲ್ಲಿ ಪರಿಸರ ಅನುಭವ ವಲಯ ಎಕಾಲಾಜಿಕಲ್ ಎಕ್ಸ್‌ಪೀರಿಯೆನ್ಸ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಕಾಮಗಾರಿ ಪೂರ್ಣಗೊಂಡಲ್ಲಿ ಪ್ರವಾಸಿಗರು, ಎತ್ತರದ ಗೋಪುರವನ್ನೇರಿ ಅಲ್ಲಿಂದ ಪ್ರಕೃತಿಯ ಸೌಂದರ್ಯವನ್ನು ಸವಿಯಬಹುದಾಗಿದೆ. ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ 'ಸ್ವದೇಶ್ ದರ್ಶನ್ 2.0' ಯೋಜನೆಯಡಿ 2024–25ನೇ ಸಾಲಿನಲ್ಲಿ ರೂಪಿಸಿದ ಯೋಜನೆ ಇದಾಗಿದ್ದು, 18.47 ಕೋಟಿ ಅನುದಾನ ಒದಗಿಸಲಾಗಿದೆ. ರಾಜ್ಯ ಪ್ರವಾಸೋದ್ಯಮ ಇಲಾಖೆಯ ಕರ್ನಾಟಕ ಮೂಲಸೌಲಭ್ಯ ನಿಗಮದ (ಕೆಟಿಐಎಲ್) ಮೂಲಕ



ಅನುಷ್ಠಾನಗೊಳಿಸಲಾಗುತ್ತಿದೆ. ಕೇಂದ್ರದಿಂದ ಯೋಜನೆ ದೊರೆತ ಕಾರಣದಿಂದ, ಸಮಗ್ರ ಕ್ರಿಯಾಯೋಜನೆ ಸಿದ್ಧಪಡಿಸಲು ಪ್ರವಾಸೋದ್ಯಮ ಇಲಾಖೆಯ ಹಿಂದಿನ ನಿರ್ದೇಶಕಿ ಎಂ.ಕೆ. ಸವಿತಾ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರ ಸಲ್ಲಿಸಿದ್ದ ಡಿಪಿಆರ್‌ನಂತೆ ಅಭಿವೃದ್ಧಿಪಡಿಸಲಾಗುತ್ತಿದೆ. ಕಾರಂಜಿ ಕೆರೆ ಪ್ರಕೃತಿ ಉದ್ಯಾನವು ನಗರದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಚಾಮರಾಜೇಂದ್ರ ಮೃಗಾಲಯಕ್ಕೆ ಬರುವವರು ಇಲ್ಲಿಗೂ ಭೇಟಿ ನೀಡಿ ಪ್ರಕೃತಿಯ ಸೌಂದರ್ಯವನ್ನು ಸವಿಯುತ್ತಾರೆ.

ಬೋಟಿಂಗ್ ಮಾಡುವುದಕ್ಕೂ ಅಲ್ಲಿ ಅವಕಾಶವಿದೆ. ಪ್ರಸ್ತುತ, ಪ್ರವಾಸಿಗರು ಜೀವವೈವಿಧ್ಯದ ಆಗರವಾದ ಕಾರಂಜಿ ಕೆರೆ ಆವರಣದಲ್ಲಿ ನಾಲ್ಕು ಕಿ.ಮೀ. ನಡೆಯುತ್ತಾ, ವಾಯುವಿಹಾರ ಮಾಡುತ್ತಾ ವೀಕ್ಷಿಸಲು ಅವಕಾಶವಿದೆ.

ಮುಂದೆ, ಮತ್ತಷ್ಟು ಪ್ರವಾಸಿಗರನ್ನು ಸೆಳೆಯುವ ಉದ್ದೇಶದಿಂದ ವಿವಿಧ ಚಟುವಟಿಕೆಗಳಿಗೆ ಅವಕಾಶ ಇರುವಂತೆ ಮಾಡುವುದಕ್ಕಾಗಿ 'ಪರಿಸರ ಅನುಭವ ವಲಯ' ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. 'ಪರಿಸರ ವೀಕ್ಷಣಾ ಗೋಪುರ, ಸೇತುವೆ, ಲೇಕ್ ವಾಕ್, ಕ್ಯಾನಿಪಿ ವಾಕ್, ಆಹಾರ ಸಂಕೀರ್ಣ, ಪ್ರವೇಶ ಸಂಕೀರ್ಣ, ಆಹಾರ ಕಿಯೋಸ್ಕ್, ಝಿಪ್‌ಲೈನ್, ಮಕ್ಕಳಿಗಾಗಿ ಹಗ್ಗಸೇತುವೆ, ಐಟಿ ಉಪಕರಣಗಳ ಅಳವಡಿಕೆ ಕಾಮಗಾರಿಯನ್ನು ಒಳಗೊಂಡಿದೆ. ಈವರೆಗೆ ಶೇ 30ರಷ್ಟು ಕಾಮಗಾರಿ ನಡೆದಿದೆ. ಪ್ರವಾಸಿಗರನ್ನು ಮತ್ತಷ್ಟು ಹೆಚ್ಚಿನ ಪ್ರಮಾಣದಲ್ಲಿ ಆಕರ್ಷಿಸುವುದು ಯೋಜನೆಯ ಉದ್ದೇಶ' ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ವಿ.ಎಂ.ಪ್ರಭುಸ್ವಾಮಿ ಮಾಹಿತಿ ನೀಡಿದರು.

# ಕನ್ನಡ ಕಲಾವಿದರ ಪ್ರೋತ್ಸಾಹಿಸದ ಸರ್ಕಾರ -ಸೋಮನಾಯಕ ಅಸಮಾಧಾನ

• ಉದಯವಾಹಿನಿ, ಚಾಮರಾಜನಗರ

ಕನ್ನಡ ಭಾಷೆಯನ್ನು ವಿಶ್ವಮಟ್ಟಕ್ಕೆ ಪಸರಿಸುವ ಕಾರ್ಯದಲ್ಲಿ ತೊಡಗಿರುವ ಕಲಾವಿದರನ್ನು ಪ್ರೋತ್ಸಾಹಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ ಎಂದು ಚಾಮರಾಜನಗರ ಮತ್ತು ಮೈಸೂರು ನಾಯಕರ ಸಂಘದ ಜಿಲ್ಲಾಧ್ಯಕ್ಷ ಕೆಲ್ಲಂಬಳ್ಳಿ ಸೋಮನಾಯಕ ಅಸಮಾಧಾನ ವ್ಯಕ್ತಪಡಿಸಿದರು. ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ನಾದಶ್ರೀ ಮೆಲೋಡಿಸ್ ವತಿಯಿಂದ ಡಾ.ರಾಜಕುಮಾರ್ ಅವರ 20ನೇ ವರ್ಷದ ಪುಣ್ಯಸ್ಮರಣೆ ಹಾಗೂ ಸಂಸ್ಥೆಯ 25ನೇ ವಾರ್ಷಿಕೋತ್ಸವದ ಅಂಗವಾಗಿ ನಡೆದ ' ರಾಜ್ ಪರಿವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ ಹುಟ್ಟಿ ಬೆಳೆದ ವರನಟ ಡಾ.ರಾಜಕುಮಾರ್ ಕನ್ನಡ ಭಾಷೆಯ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದಾರೆ ಡಾ.ರಾಜ್ ಅವರಿಗೆ ಭಾರತರತ್ನ ಪ್ರಶಸ್ತಿ ದೊರೆಯಬೇಕು, ಜನಪದ ಕಲೆಗಳ



ತವರೂರಾಗಿರುವ ಚಾಮರಾನಗರದಲ್ಲಿ ಕಲಾಸೇವೆ ಮಾಡುತ್ತಿರುವ ಕಲಾವಿದರು ಆರ್ಥಿಕ ಸಂಕಷ್ಟದಲ್ಲಿದ್ದು ಸರ್ಕಾರ ನೆರವಿಗೆ ಧಾವಿಸಬೇಕು ಎಂದರು.

ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷ ಎಂ.ರಾಮೇಗೌಡ ಮಾತನಾಡಿ, ಕನ್ನಡ ಚಿತ್ರರಂಗದ ಮೇರುನಟ ಡಾ.ರಾಜಕುಮಾರ್‌ಗೆ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡಬೇಕು, ಸಿನಿಮಾಗಳ ಮೂಲಕವೇ ಸಮಾಜವನ್ನು ಸರಿದಾರಿಗೆ ತರಲು ಶ್ರಮಿಸಿದ ಶ್ರೇಷ್ಠನಟ ಡಾ.ರಾಜ್‌ಕುಮಾರ್ ಗೌರವ ಸಲ್ಲಿಸುವುದು ಸಮಾಜದ ಕರ್ತವ್ಯ ಎಂದರು.

ಕೋವಿಡ್ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳ ಕಡಿಮೆಯಾಗಿದ್ದು ಕಲಾವಿದರು ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದಾ ರಾಜ್ಯ ಸರ್ಕಾರ ಕಲಾವಿದರಿಗೆ ನಿಯಮಿತವಾಗಿ ಮಾಸಾಶಾಸನ ನೀಡುವುದರ ಜೊತೆಗೆ ಇತರೆ ಸೌಲಭ್ಯಗಳನ್ನು ನೀಡಬೇಳ ಎಂದು ಒತ್ತಾಯಿಸಿದರು.

ನಾಯಕ ಸಮುದಾಯದ ಮುಖಂಡ ಪು. ಶ್ರೀನಿವಾಸನಾಯಕ ಮಾತನಾಡಿ, ಕನ್ನಡ ಚಿತ್ರರಂಗದ ಧ್ರುವತಾರೆ ಡಾ.ರಾಜಾ ಕನ್ನಡ ಭಾಷೆಯ ಉಳಿವಿಗೆ ಹೋರಾಡಿದ್ದಾರೆ. ಐತಿಹಾಸಿಕವಾದ ಗೋಕಾಕ್ ಚಳವಳಿಗೆ ನಾಯಕತ್ವ ನೀಡಿ ನಾಡನ್ನು ಒಗ್ಗೂಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೊಂಗನೂರು ಚಂದ್ರು, ಜಾನಪದ ಕಲಾವಿದ ಸಿ.ಎಂ.ನರಸಿಂಹಮೂರ್ತಿ, ಪರಿಸರ ಪ್ರೇಮಿ ಸಿ.ಎಂ.ವೆಂಕಟೇಶ್ ಮಾತನಾಡಿದರು.

ಮುಖಂಡರಾದ ಜಯಸುಂದರ್, ಚಂದ್ರಶೇಖರ್, ಚಾ.ಸಿ.ಸೋಮನಾಯಕ, ರವಿ ಸಂತು, ನಂದೀಶ್ ಮೂಡ್ಲುಪುರ, ಎಸ್.ಸೋಮನಾಯಕ, ಶ್ರೀನಿವಾಸಗೌಡ, ಸುರೇಶ್ ಗೌಡ ಸೇರಿದಂತೆ ಹಲವರು ಇದ್ದರು.

# ಬಿಡದಿ ಟೌನ್‌ಶಿಪ್ ವ್ಯಾಪ್ತಿಯವರು ರೈತರಲ್ಲವೇ ರೈತ ಸಂಘದ ಪದಾಧಿಕಾರಿಗಳ ಪ್ರಶ್ನೆ

• ಉದಯವಾಹಿನಿ,ಕನಕಪುರ

ರೈತರ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅನುಸರಿಸುತ್ತಿರುವ ದ್ವಂದ್ವನೀತಿ ಸರಿಯಲ್ಲ. ತಾಲ್ಲೂಕಿನ ರೈತರು ಭೂಮಿ ಉಳಿಸಿಕೊಳ್ಳಬೇಕು. ಬಿಡದಿ ಟೌನ್‌ಶಿಪ್ ವ್ಯಾಪ್ತಿಯ ರೈತರು ಭೂಮಿ ಕಳೆದುಕೊಳ್ಳಬೇಕೇ' ಎಂದು ರೈತ ಸಂಘದ ಪದಾಧಿಕಾರಿಗಳು ಪ್ರಶ್ನಿಸಿದರು.

ನಗರದಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕಾಡಳ್ಳಿ ಅನುಕುಮಾರ್, ತಾಲ್ಲೂಕು ಅಧ್ಯಕ್ಷ ಶಿವಗೂಳಿಗೌಡ ಇತರರು ಮುಖ್ಯಮಂತ್ರಿ ವಿರುದ್ಧ ಕಿಡಿ ಕಾರಿದರು. ಡಿ.ಕೆ.ಶಿವಕುಮಾರ್ ಅವರು ಬಿಡದಿ ಟೌನ್‌ಶಿಪ್ ಅನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಮಾಡಿಯೇ ತೀರುತ್ತೇನೆ' ಎಂದು ಹೇಳುತ್ತಿರುವುದನ್ನು ಖಂಡಿಸಿದರು.

ಕ್ಷೇತ್ರದ ಜನರಿಗೆ ಕೃತಜ್ಞತೆ ಸಲ್ಲಿಸುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಯಾವುದೇ ಕಾರಣಕ್ಕೂ ರೈತರು ಭೂಮಿ ಕಳೆದುಕೊಳ್ಳಬೇಡಿ. ತಾಲ್ಲೂಕಿನಲ್ಲಿ ಇನ್ನು ಮುಂದೆ ಭೂಮಿಗೆ ಚಿನ್ನದ ಬೆಲೆ ಬರುತ್ತದೆ. ನಿಮ್ಮ ಆಸ್ತಿಗಳ ಮೌಲ್ಯ ಹೆಚ್ಚಾಗುತ್ತದೆ. ಜಮೀನು ಮಾರಾಟ ಮಾಡಬೇಡಿ' ಎಂದು ಹೇಳಿದ್ದಾರೆ. ಆದರೆ ಬಿಡದಿ ಟೌನ್‌ಶಿಪ್ ವಿರೋಧಿಸಿ, 'ನಮ್ಮ ಭೂಮಿ ಉಳಿಸಿ' ಎಂದು ಭೈರಮಂಗಲದಲ್ಲಿ ನಡೆಸುತ್ತಿರುವ ಹೋರಾಟಗಾರರನ್ನು ನಕಲಿ ರೈತರು, ಅವರು ರೈತರೇ ಅಲ್ಲ. ಯಾರು ಕೃಷಿ ಮಾಡುತ್ತಿಲ್ಲ. ಭೂಮಿ



ಕೃಷಿಗೆ ಯೋಗ್ಯವಾಗಿಲ್ಲ' ಎನ್ನುತ್ತಾರೆ. ಇಂತಹ ಗೊಂದಲದ ಹೇಳಿಕೆ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತವರಿಗೆ ಸರಿಯಾಗಿ ಕಾಣುತ್ತದೆಯೇ ಎಂದು ಕೇಳಿದರು. ಭೈರಮಂಗಲ, ಕಂಚುಗಾರನಹಳ್ಳಿ ವ್ಯಾಪ್ತಿಯಲ್ಲಿ ಸುಮಾರು 8 ಸಾವಿರ ಎಕರೆ ಫಲವತ್ತಾದ ಕೃಷಿ ಭೂಮಿ ಸ್ವಾಧೀನ ಪಡಿಸಿಕೊಂಡು ರೈತರನ್ನು ಒಕ್ಕಲೆಬ್ಬಿಸಲು ಹೊರಟಿದ್ದೀರಿ. ಇದು ನ್ಯಾಯವೇ? ಅಲ್ಲಿ ಇರುವ ರೈತರು ರೈತರಲ್ಲವೇ? ಏಕೆ ಅವರು ರೈತರಾಗಿ ಕಾಣುತ್ತಿಲ್ಲ ಎಂದು ಪ್ರಶ್ನಿಸಿದರು. ಕನಕಪುರ ತಾಲ್ಲೂಕಿಗೆ ಬಂದಾಗಲೆಲ್ಲಾ ನಿಮ್ಮ ಭೂಮಿಯ ಬೆಲೆ ಕೋಟಿ– ಕೋಟಿ ಆಗುತ್ತದೆ. ಮಾರಬೇಡಿ ಎಂದು ಹೇಳುತ್ತಿದ್ದೀರಿ. ನಿಮ್ಮ ಮಾತಿನ ಅರ್ಥ ಈಗ ಮಾರಬೇಡಿ, ಮುಂದೆ ಬೆಲೆ ಹೆಚ್ಚಾದಾಗ ಮಾರಿಕೊಳ್ಳಿ ಎನ್ನುವುದೇ ಎಂದರು. ಭೂಮಿಯನ್ನೇ ನಂಬಿ ಕೃಷಿ ಮಾಡುವ ರೈತರಿಗೆ ಅದೇ ಸ್ವರ್ವಸ್ವ. ಎಷ್ಟೇ ಕೋಟಿ ಹಣ ಕೊಟ್ಟರು ಭೂಮಿ ಕಳೆದುಕೊಂಡ ಮೇಲೆ ಜೀವನ ನಡೆಸುವುದು ಹೇಗೆ? ಭೂಮಿ ಬೆಲೆ ಹೆಚ್ಚಾದಂತೆ ದುಡ್ಡಿನ ಆಸೆಗೆ ಮಾರಿಕೊಂಡು ಬೀದಿಗೆ ಬರುತ್ತಾರೆ.

ಭೂಮಿ ಬೆಲೆ ಹೆಚ್ಚಾಗುವುದು ಬೇಡ. ಬೇಸಾಯ ಮಾಡುವವರಿಗೆ ಭೂಮಿ ಬೆಲೆ ಹೆಚ್ಚಾದರೇನು? ಕಡಿಮೆಯಾದರೇನು ಎಂದು ಕೇಳಿದರು. ಬಿಡದಿ ಹೋಬಳಿಯ ಈಗಲ್‌ಟನ್ ರೆಸಾರ್ಟ್‌ಗೆ ಭೂಮಿ ಸ್ವಾಧೀನ ಪಡಿಸಿಕೊಂಡಾಗ ಎಕರೆಗೆ 12 ಕೋಟಿ ಪರಿಹಾರ ನೀಡಿದ್ದೀರಿ. ಈಗ ಬಿಡದಿ ಟೌನ್‌ಶಿಪ್‌ಗೆ ವಶಪಡಿಸಿಕೊಳ್ಳುವ ಭೂಮಿಗೆ 2 ಕೋಟಿ ಪರಿಹಾರ ಘೋಷಣೆ ಮಾಡಿ, ಅತಿಹೆಚ್ಚಿನ ಪರಿಹಾರ ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಹೆಚ್ಚಿನ ಪರಿಹಾರ ಕೊಟ್ಟರೆ ರೈತರು ಭೂಮಿ ಕೊಡಲಿ ಎಂದು ನಾವು ಹೇಳುತ್ತಿಲ್ಲ. ಮೊದಲು ಭೂಸ್ವಾಧೀನ ಕೈಬಿಟ್ಟು ಭೂಮಿ ಉಳಿಸಿ, ರೈತರಾಗಿ ಕೃಷಿ ಮಾಡಲು ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡರು.ಸಾತನೂರು ಹೋಬಳಿ ಅಧ್ಯಕ್ಷ ಸತೀಶ್, ಕಸಬಾ ಹೋಬಳಿ ಅಧ್ಯಕ್ಷ ನಾರಾಯಣ್, ಮುಖಂಡರಾದ ಸ್ವಾಮಣ್ಣ, ಚನ್ನಪ್ಪ, ನಿಂಗೇಗೌಡ ಉಪಸ್ಥಿತರಿದ್ದರು.

### ರೈತರ ಒಗ್ಗಟ್ಟು ಒಡೆಯಬೇಡಿ

ಅಧಿಕ ಪರಿಹಾರದ ಆಸೆ ತೋರಿಸಿ, ರೈತರ ಒಗ್ಗಟ್ಟು ಮುರಿಯುವ ಕೆಲಸ ಮಾಡಬೇಡಿ. ರಾಜಕೀಯ ಅಧಿಕಾರ ಪಡೆಯಲು ಏನು ಬೇಕಾದರೂ ಮಾಡಿ. ಆದರೆ ರೈತರ ಭೂಮಿ ಕಿತ್ತುಕೊಳ್ಳಲು ರೈತರ ಒಗ್ಗಟ್ಟು ಒಡೆಯಬೇಡಿ ಎಂದು ಸಲಹೆ ಮಾಡಿದರು. ಕನಕಪುರ ತಾಲ್ಲೂಕಿನಲ್ಲಿ ಇರುವವರು ಹೇಗೆ ರೈತರೊ, ಅದೇ ರೀತಿ ಭೈರಮಂಗಲ, ಕಂಚುಗಾರನಹಳ್ಳಿ ವ್ಯಾಪ್ತಿಯಲ್ಲಿ ಇರುವವರು ರೈತರೇ. ಅವರು ನಿಮ್ಮವರೇ, ನಿಮ್ಮ ಜಿಲ್ಲೆಯವರೇ ಎಂಬುದನ್ನು ಮರೆಯಬೇಡಿ.

# ಮಿನಿ ನ್ಯೂಸ್

## ಜೆಡಿಎಸ್-ಬಿಜೆಪಿ ಮೈತ್ರಿಯಲ್ಲಿ ಬಿರುಕು ಸೃಷ್ಟಿಸಲು ಕಾಂಗ್ರೆಸ್ ಷಡ್ಯಂತ್ರ: ಆರೋಪ

• ಉದಯವಾಹಿನಿ, ಮಂಡ್ಯ

ರಾಜ್ಯಸಭೆ ಟಿಕೆಟ್‌ಗೆ ದೇವೇಗೌಡರು ಅರ್ಜಿಯೇ ಹಾಕಿಲ್ಲ. ಆದರೆ ಕಾಂಗ್ರೆಸ್ ನಾಯಕರಿಗೆ ಗೌಡರ ಬಗ್ಗೆ ಅತಿಯಾದ ಅನುಕಂಪ ಬಂದಿದೆ. ಜೆಡಿಎಸ್ ಮತ್ತು ಬಿಜೆಪಿ ನಡುವಿನ ಮೈತ್ರಿಯಲ್ಲಿ ಬಿರುಕು ಸೃಷ್ಟಿಸಲು ಯತ್ನಿಸುತ್ತಿದ್ದಾರೆ' ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ತಗ್ಗಹಳ್ಳಿ ಗ್ರಾಮದಲ್ಲಿ ಸಿಎಸ್ ಆರ್ ನಿಧಿ ಅನುದಾನದಿಂದ ನೂತನವಾಗಿ ನಿರ್ಮಾಣಗೊಂಡಿರುವ ಶಾಲಾ ಕೊಠಡಿಗಳನ್ನು ಮಂಗಳವಾರ ಉದ್ಘಾಟಿಸಿದ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ದೇವೇಗೌಡರದ್ದು ಹೋರಾಟದ ಬದುಕು. ಅಧಿಕಾರಕ್ಕಾಗಿ ಹಪಾಹಪಿಸಿದವರಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದರು. ಅದೆಲ್ಲವೂ ಕಾಂಗ್ರೆಸ್ ಪಕ್ಷಕ್ಕೆ ಗೊತ್ತಿಲ್ಲವೇ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು. ಕಳೆದ ಬಾರಿ ದೇವೇಗೌಡರ ವಿರುದ್ಧ ಇನ್ನೊಬ್ಬ ಅಭ್ಯರ್ಥಿ ನಿಲ್ಲುವ ಅವಕಾಶ ಇರಲಿಲ್ಲ. ಆ ಸಂದರ್ಭದಲ್ಲಿ ಯಾವುದೇ ಪಕ್ಷಕ್ಕೆ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿ ಗೆಲ್ಲಿಸಿಕೊಳ್ಳುವಷ್ಟು ಸಂಖ್ಯಾಬಲ ಇರಲಿಲ್ಲ. ನಮ್ಮ ಪಕ್ಷಕ್ಕೆ ಸಂಖ್ಯಾಬಲ ಇತ್ತು. ಹೀಗಾಗಿ ರಾಜ್ಯಸಭೆಗೆ ದೇವೇಗೌಡರು ಆಯ್ಕೆಯಾದರು. ಅವರು ಕಾಂಗ್ರೆಸ್ ಬೆಂಬಲದಿಂದ ರಾಜ್ಯಸಭೆಗೆ ಹೋಗಲಿಲ್ಲ ಎಂದು ತಿರುಗೇಟು ನೀಡಿದರು. ಜಮೀರ್ ನನ್ನ ಸಂಪರ್ಕದಲ್ಲಿ ಇಲ್ಲ. ಮಾಜಿ ಸಚಿವ ಜಮೀರ್ ಅಹಮದ್ ಖಾನ್ ಅವರು ನನ್ನ ಜತೆ ಸಂಪರ್ಕ ಹೊಂದಿಲ್ಲ.

## 21ರಂದು ಮೈಸೂರು ಅರಮನೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ

• ಉದಯವಾಹಿನಿ, ಮೈಸೂರು

ಜಿಲ್ಲಾಡಳಿತದಿಂದ ಜೂನ್ 21ರಂದು ಇಲ್ಲಿನ ಅಂಬಾವಿಲಾಸ ಅರಮನೆ ಆವರಣದಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ನಡೆಸಲಾಗುವುದು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಐಶ್ವರ್ಯ ಆರ್. ತಿಳಿಸಿದರು. ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜನರು ಯೋಗವನ್ನು ಯೋಗದಿನಕ್ಕೆ ಮಾತ್ರ ಮೀಸಲಿಡದೆ ನಿತ್ಯವೂ ಅಭ್ಯಾಸ ಮಾಡಬೇಕು. ಜೀವನದ ಭಾಗವನ್ನಾಗಿ ಮಾಡಿಕೊಳ್ಳಬೇಕು. ಯೋಗಾಸನಗಳಿಂದ ದೇಹದ ಎಲ್ಲಾ ಸ್ನಾಯು ಹಾಗೂ ನರಗಳಿಗೆ ವ್ಯಾಯಾಮ ದೊರೆತು, ಆರೋಗ್ಯಯುತ ಜೀವನಕ್ಕೆ ಸಹಾಯ ಆಗುತ್ತದೆ ಎಂದು ಹೇಳಿದರು.

21ರಂದು ಬೆಳಿಗ್ಗೆ 6ರಿಂದ 8ರವರೆಗೆ ವಿವಿಧ ಆಸನಗಳನ್ನು ಪ್ರದರ್ಶಿಸಲಾಗುವುದು. ಜಿಲ್ಲೆಯ ವಿವಿಧ ಯೋಗ ಸಂಸ್ಥೆಗಳವರು ಪಾಲ್ಗೊಳ್ಳಬೇಕು. ಮಹಾನಗರ ಪಾಲಿಕೆಯಿಂದ ಸ್ವಚ್ಛತೆ, ಕುಡಿಯುವ ನೀರು, ಅರಮನೆ ಮಂಡಳಿ ವತಿಯಿಂದ ವೇದಿಕೆ, ಧ್ವನಿವರ್ಧಕ, ಪೊಲೀಸ್ ಇಲಾಖೆಯಿಂದ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು' ಎಂದು ಸೂಚಿಸಿದರು.

## ಚಿಕ್ಕಬಳ್ಳಾಪುರದಲ್ಲಿ ನಕಲಿ ಡಿಇಎಫ್ ತಯಾರಿಕಾ ಘಟಕದ ಮೇಲೆ ದಾಳಿ


• ಉದಯವಾಹಿನಿ, ಚಿಕ್ಕಬಳ್ಳಾಪುರ

ಯೂರಿಯಾ ಬಳಸಿ ವಿವಿಧ ಪ್ರತಿಷ್ಠಿತ ಕಂಪನಿಗಳ ಬ್ರಾಂಡ್‌ನಲ್ಲಿ ನಕಲಿ ಡಿಇಎಫ್ ತಯಾರಿಸುತ್ತಿದ್ದ ಘಟಕದ ಮೇಲೆ ಪೊಲೀಸರು ಮತ್ತು ಕೃಷಿ ಇಲಾಖೆ ಜಾರಿ ದಳದ ಅಧಿಕಾರಿಗಳು ದಾಳಿ ನಡೆಸಿ 216 ಚೀಲ ಯೂರಿಯಾ ವಶಕ್ಕೆ ಪಡೆದಿದ್ದಾರೆ. ಡಿಇಎಫ್ ಎನ್ನುವುದು ಡೀಸೆಲ್ ವಾಹನಗಳಿಂದ ಹೊರಸೂಸುವ ಮಾಲಿನ್ಯವನ್ನು ನಿಯಂತ್ರಿಸಲು ಬಳಸುವ ದ್ರವವಾಗಿದೆ. ನಗರದ ಹೊರವಲಯದ ಚದುಲಪುರದಿಂದ ಕೊಂಡೇನಹಳ್ಳಿಗೆ ಮಾರ್ಗದಲ್ಲಿರುವ ಗೋದಾಮು ಬಾಡಿಗೆ ಪಡೆದು ರಾಜಸ್ಥಾನ ಮೂಲದವರು ಈ ಅಕ್ರಮ ನಡೆಸುತ್ತಿದ್ದರು. ಕೃಷಿಗೆ ಸಬ್ಸಿಡಿ ದರದಲ್ಲಿ ಬಳಸುವ ಯೂರಿಯಾ ಮತ್ತು ಕೈಗಾರಿಕೆಗಳಿಗೆ ಬಳಸುವ ಯೂರಿಯಾದಿಂದ ಡಿಇಎಫ್ ತಯಾರಿಸುತ್ತಿದ್ದರು. ಈ ಬಗ್ಗೆ ಕೃಷಿ ಇಲಾಖೆಯ ಜಾರಿದಳದ ಅಧಿಕಾರಿಗಳಿಗೆ ಖಚಿತ ಮಾಹಿತಿ ದೊರೆತಿತ್ತು.

ಮಹೀಂದ್ರ, ಟಾಟಾ, ಭಾರತ್ ಬೆನ್ ಬ್ರಾಂಡ್‌ನ ನಕಲಿ ಡಿಇಎಫ್ ಅನ್ನು ಇಲ್ಲಿ ತಯಾರಿಸಲಾಗುತ್ತಿತ್ತು. ಚದುಲಪುರದಿಂದ ಕೊಂಡೇನಹಳ್ಳಿಗೆ ಮಾರ್ಗದಲ್ಲಿರುವ ಈ ಡಿಇಎಫ್ ಅನ್ನು ಡೀಸೆಲ್ ಎಂಜಿನ್‌ಗಳಿಗೆ ಬಳಸಲಾಗುತ್ತದೆ. ಅಧಿಕಾರಿಗಳು ದಾಳಿ ನಡೆಸುತ್ತಿದ್ದಂತೆ ಘಟಕದಲ್ಲಿ ಇದ್ದವರು ಪರಾರಿ ಆಗಿದ್ದಾರೆ.

ಜಿಲ್ಲಾಧಿಕಾರಿ ಪ್ರಭು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಉಪವಿಭಾಗಾಧಿಕಾರಿ ಅಶ್ವಿನ್ ಕುಮಾರ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಬಿದ್ ಹಾಗೂ ಕಂದಾಯ, ಪೊಲೀಸ್, ಮಾಲಿನ್ಯ ನಿಯಂತ್ರಣ ಘಟಕದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ನಂದಿ ಗಿರಿಧಾಮ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದೆ.

## ಮಂಡ್ಯದಲ್ಲಿ ಮನಕಲಕುವ ಘಟನೆ: ತಂದೆ-ತಾಯಿ, ಮಗ ನಿಗೂಢ ಸಾವು; ಡೆತ್ ನೋಟ್‌ನಲ್ಲಿ ಶಕ್ತಿ ಯೋಜನೆ ಉಲ್ಲೇಖ!



• ಉದಯವಾಹಿನಿ, ಮಂಡ್ಯ

ಸಕ್ಕರೆ ನಾಡು ಮಂಡ್ಯದಲ್ಲಿ ಮನಕಲಕುವ ಘಟನೆಯೊಂದು ನಡೆದಿದ್ದು, ಜಿಲ್ಲೆಯ ನೆಹರು ನಗರದಲ್ಲಿ ಒಂದೇ ಕುಟುಂಬದ ಮೂವರು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ. ಮೃತರನ್ನು ಪ್ರಭಾಕರ್, ಅವರ ಪತ್ನಿ ಜ್ಯೋತಿ ಹಾಗೂ ನವವಿವಾಹಿತ ಪುತ್ರ ಸಂತೋಷ್ ಎಂದು ಗುರುತಿಸಲಾಗಿದೆ.


ಜ್ಯೋತಿ ಮತ್ತು ಸಂತೋಷ್ ಅವರು ಕಳೆದ ರಾತ್ರಿ ಮನೆಯಲ್ಲೇ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಇತ್ತ ಇಂದು ಬೆಳಗ್ಗೆ ಪ್ರಭಾಕರ್ ಅವರು ತಮ್ಮದೇ ಬಟ್ಟೆ ಅಂಗಡಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ.

ಒಂದೇ ಕುಟುಂಬದ ಮೂವರು ಸಾವನ್ನಪ್ಪಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಮೃತ ಸಂತೋಷ್ ಅವರಿಗೆ ಕೇವಲ ಒಂದು ತಿಂಗಳ ಹಿಂದಷ್ಟೇ ಮದುವೆ ಆಗಿತ್ತು. ಘಟನಾ ಸ್ಥಳಕ್ಕೆ ಮಂಡ್ಯ ಪೂರ್ವ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮೂವರ ಸಾವಿಗೆ ನಿಖರ ಕಾರಣ ಏನು ಎಂಬುದು ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಆದರೆ ಸಾಲದ ಒತ್ತಡ ಹಾಗೂ ವ್ಯಾಪಾರದಲ್ಲಿ ಉಂಟಾದ ತೀವ್ರ ನಷ್ಟದಿಂದ ಬೇಸತ್ತ ಬಟ್ಟೆ ವ್ಯಾಪಾರಿಯಾಗಿರುವ ಪ್ರಭಾಕರ್ ಅವರು, ತಮ್ಮ ಪತ್ನಿ ಮತ್ತು ಮಗನನ್ನು ಉಸಿರುಗಟ್ಟಿಸಿ ಕೊಲೆ ಮಾಡಿ, ಬಳಿಕ ತಾವೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಅಂತರಾಳದಿಂದ..
EDITORIAL

# ಎಲ್ ನಿನೊ: ದೂರದೃಷ್ಟಿಯುಳ್ಳ ಕಾರ್ಯ ಯೋಜನೆ ಅಗತ್ಯ



ಸಾಮಾನ್ಯವಾಗಿ ಜೂನ್ 1ರಂದು ಕೇರಳಕ್ಕೆ ಆಗಮಿಸುವ ಮುಂಗಾರು ಮಾರುತಗಳು ಈ ಬಾರಿ ಮೂರ್ನಾಲ್ಕು ದಿನ ತಡವಾಗಿ ಬಂದಿವೆ. ವಿಳಂಬವಷ್ಟೇ ಅಲ್ಲ, ಈ ಬಾರಿಯ ಮಳೆಗಾಲದಲ್ಲಿ ವಾಡಿಕೆಯಷ್ಟು ಮಳೆಯಾಗದು ಎಂಬುದು ಭಾರತೀಯ ಹವಾಮಾನ ಇಲಾಖೆ ಈಗಾಗಲೇ ನೀಡಿರುವ ಮುನ್ಸೂಚನೆ.

ಜೂನ್‌ನಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ ಪೆಸಿಫಿಕ್ ಮಹಾಸಾಗರದಲ್ಲಿ ಎಲ್ ನಿನೊ' ವಿದ್ಯಮಾನವು ತೀವ್ರ ಸ್ವರೂಪ ಪಡೆಯಲಿದ್ದು, ಜಾಗತಿಕ ಹವಾಮಾನದ ಮೇಲೆ ಭಾರೀ ಪರಿಣಾಮ ಉಂಟುಮಾಡಲಿದೆ ಎಂದು ವಿಶ್ವ ಹವಾಮಾನ ಸಂಸ್ಥೆಯೂ ಮುನ್ಸೂಚನೆ ನೀಡಿದೆ. ಇದು ಇಡೀ ಜಗತ್ತು ಮತ್ತು ವಿಶೇಷವಾಗಿ ಭಾರತವು ಎದುರಿಸಲಿರುವ ಭವಿಷ್ಯದ ಕಠಿನ ದಿನಗಳ ಮುನ್ನೆಚ್ಚರಿಕೆಯಾಗಿದೆ.

ಒಂದೆಡೆ ಭಾರತದ ಪ್ರಮುಖ ಆರ್ಥಿಕ ಮತ್ತು ತಾಂತ್ರಿಕ ಕೇಂದ್ರಗಳಾದ ಬೆಂಗಳೂರು, ದಿಲ್ಲಿ, ಮುಂಬಯಿ ಹಾಗೂ ಹೈದರಾಬಾದ್‌ನಲ್ಲಿ ಮಳೆ ಕೊರತೆಯಾ-ಗುವ ಭೀತಿ ಎದುರಾಗಿದ್ದರೆ, ಮತ್ತೊಂದೆಡೆ ಆಫ್ರಿಕಾದ ಆಡಿಸ್ ಅಬಾಬಾ, ಬ್ರಝಿಲ್‌ನ ರೆಸಿಫೆ ಹಾಗೂ ಆಸ್ಟ್ರೇಲಿಯದ ಸಿಡ್ನಿ, ಮೆಲ್ಬೋರ್ನ್ ನಗರಗಳು ಒಣ ಹವೆ ಮತ್ತು ಬರದ ಛಾಯೆಗೆ ಸಿಲುಕಲಿವೆ. ಇದೇ ಸಮಯದಲ್ಲಿ, ಪೆಸಿಫಿಕ್ ಮಹಾಸಾಗರದ ಪೂರ್ವ ಭಾಗ ಹಾಗೂ ಈಕ್ವೆಡಾರ್ ಕರಾವಳಿಯಲ್ಲಿ ಅತಿವೃಷ್ಟಿ ಮತ್ತು ಪ್ರವಾಹದ ಮುನ್ಸೂಚನೆ ಇದೆ. ಈ ಭೌಗೋಳಿಕ ಹವಾಮಾನ ವೈಪರೀತ್ಯವು ಜಾಗತಿಕ ಆಹಾರ ಭದ್ರತೆ, ಜಲಸಂಪನ್ಮೂಲ ಮತ್ತು ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ.

ನಗರಗಳ ಪ್ರತಿಯೊಂದು ಕಟ್ಟಡದಲ್ಲೂ ಮಳೆನೀರು ಕೊಯ್ಲು ಕಡ್ಡಾಯಗೊಳಿಸಬೇಕು ಮತ್ತು ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಭವಿಷ್ಯದಲ್ಲಿ ಇದನ್ನು ಗ್ರಾಮೀಣ ಮಟ್ಟಕ್ಕೂ ವಿಸ್ತರಿಸಬೇಕು. ಸಾಂಪ್ರದಾಯಿಕ ಜಲಮೂಲಗಳನ್ನು ಹೂಳು ತೆಗೆದು, ಒತ್ತುವರಿ ಮುಕ್ತಗೊಳಿಸಿ ನೀರು ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಕೃಷಿ ವಲಯದಲ್ಲಿ ಬದಲಾವಣೆಯಾಗಿ ಬರನಿರೋಧಕ ತಳಿಗಳ ಬಳಕೆಯನ್ನು ಉತ್ತೇಜಿಸಬೇಕಿದೆ. ಮಳೆ ಕೊರತೆ ಇರುವ ಪ್ರದೇಶಗಳಲ್ಲಿ ಕಡಿಮೆ ನೀರು ಸಾಕಾಗುವ ರಾಗಿ, ಜೋಳ, ನವಣೆಯಂತಹ ಸಿರಿಧಾನ್ಯಗಳನ್ನು ಬೆಳೆಯಲು ರೈತರನ್ನು ಪ್ರೋತ್ಸಾಹಿಸಬೇಕು. ಹನಿ ನೀರಾವರಿ ಮತ್ತು ತುಂತುರು ನೀರಾವರಿಯನ್ನು ವ್ಯಾಪಕವಾಗಿ ಬಳಸುವ ಮೂಲಕ ನೀರಿನ ಪೋಲನ್ನು ತಡೆಯಬೇಕು.


ನಗರಗಳಲ್ಲಿ ತಾಪಮಾನ ನಿಯಂತ್ರಿಸಲು ನಗರೋದ್ಯಾನಗಳು ಹಾಗೂ ಮಿಯಾವಾಕಿ ಮಾದರಿಯ ಕಿರುಕಾಡುಗಳನ್ನು ಬೆಳೆಸಬಹುದು. ಹವಾಮಾನ ಇಲಾಖೆಯ ಮುನ್ಸೂಚನೆಗಳನ್ನು ಆಧರಿಸಿ ಸರಕಾರಗಳು ಮುಂಚಿತವಾಗಿಯೇ ಬರ ಪರಿಹಾರ ನಿಧಿ, ಪರ್ಯಾಯ ಜಲಮೂಲಗಳ ಪೂರೈಕೆ ಮತ್ತು ಮೇವಿನ ಬ್ಯಾಂಕುಗಳನ್ನು ಸ್ಥಾಪಿಸಬೇಕು. ವಿಶ್ವ ಹವಾಮಾನ ಸಂಸ್ಥೆಯ ಈ ವರದಿಯು ಜಾಗತಿಕ ಸಮುದಾಯಕ್ಕೆ ಎಚ್ಚರಿಕೆಯ ಘಂಟೆ. ಪ್ರಕೃತಿಯು ನೀಡುತ್ತಿರುವ ಈ ಸೂಚನೆಗಳನ್ನು ನಿರ್ಲಕ್ಷಿಸಿದರೆ ಭವಿಷ್ಯದಲ್ಲಿ ತೀವ್ರ ಹಸಿವು, ವಲಸೆ ಮತ್ತು ಸಾಮಾಜಿಕ ಅಸ್ಥಿರತೆಯನ್ನು ಎದುರಿಸಬೇಕಾಗುತ್ತದೆ. ಹವಾಮಾನ ಬದಲಾವಣೆಯ ಸವಾಲನ್ನು ಎದುರಿಸಲು ಕೇವಲ ಸರಕಾರದ ನೀತಿಗಳು ಸಾಕಾಗುವುದಿಲ್ಲ ಸಾರ್ವಜನಿಕರ ಸಹಭಾಗಿತ್ವ ಮತ್ತು ಸುಸ್ಥಿರ ಜೀವನಶೈಲಿಯ ಅಳವಡಿಕೆ ಇಂದಿನ ತುರ್ತು ಅಗತ್ಯವಾಗಿದೆ

## ಕೃಷಿ ಉತ್ಪಾದನೆ ಕುಂಠಿತ

ಬೆಂಗಳೂರು ಮತ್ತು ಹೈದರಾಬಾದ್ ಈಗಾಗಲೇ ಅಂತರ್ಜಲ ಕುಸಿತ ಹಾಗೂ ಬೇಸಗೆಯಲ್ಲಿ ನೀರಿನ ಅಭಾವವನ್ನು ಎದುರಿಸುತ್ತಿವೆ. ಮುಂಗಾರು ಮಳೆ ಕೊರತೆಯಾದರೆ ಕುಡಿಯುವ ನೀರಿನ ಬಿಕ್ಕಟ್ಟು ಉಂಟಾಗಬಹುದು.

ಗ್ರಾಮೀಣ ಭಾಗದಲ್ಲಿ ಕೃಷಿ ಉತ್ಪಾದನೆ ಕುಂಠಿತಗೊಂಡು, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಲಿದೆ. ಜಲವಿದ್ಯುತ್ ಉತ್ಪಾದನೆ ಕಡಿಮೆಯಾಗಿ ವಿದ್ಯುತ್ ಬೇಡಿಕೆ ಹೆಚ್ಚಾಗಿ ಲೋಡ್‌ಶೆಡ್ಡಿಂಗ್ ಸಮಸ್ಯೆ ಎದುರಾಗಬಹುದು. ಎಲ್ ನಿನೊದಂತಹ ಜಾಗತಿಕ ವಿದ್ಯಮಾನಗಳನ್ನು ನಾವು ತಡೆಯಲು ಸಾಧ್ಯವಿಲ್ಲದಿದ್ದರೂ ಸೂಕ್ತ ಯೋಜನೆಯ ಮೂಲಕ ಅವುಗಳ ತೀವ್ರತೆಯನ್ನು ಎದುರಿಸಲು ಸಜ್ಜಾಗಬಹುದು.

# ರಾಮಾಯಣ



ಮಾರುತಿಯು ಕಾಲರುದ್ರನ ಹಾಗೆ ಸೇನಾಪತಿಗಳನ್ನೂ ಅಕ್ಷಕುಮಾರನನ್ನೂ ಕೊಂದದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**


ಅದ್ರಿತನುಸಂಭವೆಯೇ ಕೇಳು, ಹೀಗೆ ಒಟ್ಟಿಗೇ ಮಂತ್ರಿಸುತರೆಲ್ಲ ಸಾಯಲು ದಶಕಂಠನು ನಿಟ್ಟುಸಿರುಬಿಡುತ್ತ ಕೋಪದಿಂದ ಯೂಪಾಕ್ಷ ದುರ್ಧರ ಪ್ರಘಸ ಭಾಸಕರ್ಣ ವಿರೂಪಾಕ್ಷರೆಂಬ ಐದು ಮಂದಿಯನ್ನು ಕರೆದು, ಚಂಡಬಲನಂತೆ ಕಾಣುವ ಕಪಿಯನ್ನು ನಿಗಹಿಸಲು ಗಾಂಧರ್ವಭಟರಿಂದಲೂ ಚತುರಂಗಸೈನ್ಯಗಳಿಂದಲೂ ಕೂಡಿ ಈಗಲೇ ಹೊರಡಿರಿ ಎಂದು ಆ ಸೇನಾಪತಿಗಳಿಗೆ ಆಜ್ಞಾಪಿಸಿ, ಕಪಿಯನ್ನು ಹಿಡಿದು ತರಲು ಏನೇನು ಉಪಾಯಗಳನ್ನು ಅನುಸರಿಸಬೇಕೆಂದು ಸೂಚನೆಯಿತ್ತ ವಾಲಿ ಸುಗ್ರೀವ ಮೈಂದ ದ್ವಿವಿದ ಗಜ ಗವಯ ನೀಲ ನಳ ಶತಬಲಿ ಸುಷೇಣ ಮುಂತಾದ ಮುಖ್ಯರ ಹೆಸರನ್ನು ಹಿಂದೆಯೇ ಕೇಳಿದ್ದೀರಲ್ಲವೇ? ಧೈರ್ಯಶೌರ್ಯಮಾಯೆಗಳನ್ನು ಅವರು ಗಣಿಸುವಂಥವರಲ್ಲ; ಆದ್ದರಿಂದ ಅಂಥವರ ಬೆಂಬಲವಿರುವ ಬಾಲಸೂರ್ಯಪ್ರಭೆಯಿಂದ ಕೂಡಿದ ಕಪಿವರನನ್ನು ಸಾಮಾನ್ಯಬುದ್ಧಿಯಿಂದ ಹೋಗಿ ಆತುರದಿಂದ ಕೆಣಕಬೇಡಿ. ಶತ್ರುಗಳ ಬಲಾಬಲಗಳನ್ನು ತಿಳಿಯದೆ ಯುದ್ಧಕ್ಕೆ ಹೋದರೆ ಗೆಲವು ದೊರೆಯುವುದಿಲ್ಲ, ಹೀಗಾಗಿ ನಿಮ್ಮ ಸಾಮರ್ಥ್ಯವನ್ನು ನೆನೆಪಿನಲ್ಲಿಟ್ಟುಕೊಂಡು ಎಚ್ಚರಿಕೆಯಿಂದ ಕಾರ್ಯ ಕೈಗೂಡುವ ಮಾರ್ಗವನ್ನು ಅನುಸರಿಸಿರಿ ಎಂದು ಅವರನ್ನು ಬೀಳ್ಕೊಟ್ಟ ಆ ಬಲೋದ್ಧತರು ಒಡೆಯನ ಆಜ್ಞೆಯಂತೆ ಅಮಿತಬಲದೊಂದಿಗೆ ಭೂಮಿ ನಡುಗುವಂತೆ ಬೇಗ ಬೇಗ ನಡೆದು ಬಂದು ಮಧ್ಯಾಹ್ನದ ಸೂರ್ಯನಂತೆ ತೋರಣದಲ್ಲಿ ಕುಳಿತಿದ್ದ ಕಪೀಶ್ವರನನ್ನು ಕಂಡು ಕೆಲವು ಬಾಣಗಳನ್ನು ಬಿಟ್ಟು ಬೊಬ್ಬಿಟ್ಟು ಎಲ್ಲಾ ದಿಕ್ಕುಗಳಿಂದಲೂ ಅವನ ಮೇಲೆ ಶಸ್ತದ ಮಳೆ ಸುರಿಸಿದರು. ಅಸುರರ ಬಿರುಸಿನ ಬಾಣಗಳ ದಾಳಿಯನ್ನು ಕಂಡು ಅಂಜನಾಸುತನು ತಕ್ಷಣವೇ ಆಗಸಕ್ಕಡರಿ ಬೊಬ್ಬಿಡುತ್ತ ಭೂಮಿಗೆ ದುಮುಕಿ ದುರ್ಧರನ ರಥಗಳು ಬಿಲ್ಲುಬಾಣಗಳನ್ನು ಹೇಳಹೆಸರಿಲ್ಲದಂತೆ ತನ್ನ ಕಾಲುಗಳಡಿಯಲ್ಲಿ ಸಿಲುಕಿಸಿಕೊಂಡು ಹುಡಿಗುಟ್ಟಿದ. ಅದನ್ನು ಕಂಡ ವಿರೂಪಾಕ್ಷ ಯೂಪಾಕ್ಷರು ಅತಿ ವೇಗದಿಂದ ಎಲ್ಲಾ ಬಗೆಯ ಶಸ್ತ್ರಗಳನ್ನೂ ಅವನ ಮೇಲೆ ಪ್ರಯೋಗಿಸಿದುದಲ್ಲದೆ, ಶೂಲ ಪಟ್ಟಿಸ ಕೊಡಲಿಗಳಿಂದ ಹೊಡೆಯಲು, ಕಪಿವರನು ಕಡುಗೋಪದಿಂದ ಇಬ್ಬರನ್ನೂ ತಕ್ಷಣವೇ ಕೆತ್ತಿ ನೆಲದ ಮೇಲೆ ಬಿಸಾಡಿದ ಅವರ ನೆತ್ತರು ನೆಲದಲ್ಲಿ ಹರಿಯಿತು. ಆಗ ಭಾಸಕರ್ಣನು ತೀವ್ರ ಕ್ರೋಧದಿಂದ ಪಟ್ಟಿಸವನ್ನು ಹಿಡಿದು ಆರ್ಭಟದಿಂದ ಹನುಮನಿಗೆ ಬಲವಾಗಿ ಹೊಡೆದ. ಆಗಸದಲ್ಲಿ ಸೂರ್ಯನಂತೆ ಪ್ರಜ್ವಲಿಸುತ್ತಿದ್ದ ಕಪಿರಾಯನು ಅದಕ್ಕೆ ಹೆದರದೆ, ಹಾವನ್ನು ಹಿಡಿಯಲು ಗರುಡನು ಭೂಮಿಗೆರಗುವಂತೆ, ದಾನವನನ್ನು ಹಿಡಿದು ಅವನ ಆಯುಧವನ್ನು ಕಿತ್ತು ಬಿಸುಟು ತನ್ನ ಕಾಲುಗುರುಗಳಿಂದಲೇ ಅವನನ್ನು ಸೀಳಿ ಕೆಳಕ್ಕೆಸೆದು ಮತ್ತೆ ಆಕಾಶಕ್ಕೆ ಹಾರಿದ. ಹೀಗೆ ಎದುರಾದ ಎಲ್ಲಾ ಸೇನಾನಿಗಳು ಮಡಿಯಲು ಮಾರುತಿಯು ಶೂಲವೊಂದನ್ನು ಹಿಡಿದುಕೊಂಡು ಉಳಿದ ಸೈನ್ಯವನ್ನೆಲ್ಲ ಸವರಿ, ಮತ್ತೇಭಗಳನ್ನು ಬಡಿದು, ಕುದುರೆಗಳನ್ನು ಅಪ್ಪಳಿಸಿ, ರಥಗಳನ್ನು ಕೆಡಹಿ ನುಚ್ಚುನುರಿಮಾಡಿ ಅರೆನಿಮಿಷದಲ್ಲಿ ಪಡೆಯನ್ನೆಲ್ಲ ಹುಡಿಗುಟ್ಟಿ ಘುಡುಘುಡಿಸುತ್ತ ಹಿಂದಿನಂತೆಯೇ ತೋರಣದಲ್ಲಿ ಹೋಗಿ ಕುಳಿತುಕೊಂಡ. ತಾನು ಕಳಿಸಿದ ಈ ಬಲಸಮಗ್ರವನ್ನೂ ವಾಯುಸುತನು ನಾಶಮಾಡಿದುದನ್ನು ಕೇಳಿದ ದಶಕಂಠನ ರೌದ್ರವು ತಾರಕಕ್ಕೇರಿತು ಎಡಬಲಗಳನ್ನು ನೋಡಿ ಮಹಾಪರಾಕ್ರಮಿಯಾದ ತನ್ನ ಮಗ ಅಕ್ಷಕುಮಾರನತ್ತ ಮುಖ ತಿರುಗಿಸಲು, ಅವನು ತಕ್ಷಣವೇ ತಂದೆಯ ಬಳಿ ಬಂದು ಅವನ ಪಾದಗಳಿಗೆರಗಿ ಆಶೀರ್ವಾದವನ್ನು ಪಡೆದು ಸಮರಸಿದ್ಧನಾಗಿ ಹೊರಟ. ಪೂರ್ವದ ತಪಃಫಲದಿಂದಾಗಿ ಬಾಲಸೂರ್ಯಪ್ರಭೆಯಿಂದ ಕೂಡಿ ಹರಸಮಾನ ಶೂರನಾದ ಅಕ್ಷನು ಪ್ರದಕ್ಷಣೆ ಹಾಕಿ ಹೊಂದೇರನ್ನಡರಿ ತನ್ನ ಬಿಲ್ಲನ್ನು ಹಿಡಿದು ಹೋರಾಟಕ್ಕೆ ಬಂದ ಅವನನ್ನು ಚತುರಂಗಸೈನ್ಯವು ಹಿಂಬಾಲಿಸಿತು ಶಸ್ತ್ರಾಸ್ತ್ರಗಳನ್ನು ಹಿಡಿದ ಅಸಂಖ್ಯಾತ ಯೋಧರು ದುಂದುಭಿ ಕಹಳೆ ಕಾಂಸ್ಯ ಸುಷಿರ ಮೊದಲಾದ ವೀರವಾದ್ಯಗಳ ಭೋರ್ಗರೆತದೊಡನೆ ಜೊತೆಗೂಡಿದರು. ಆ ಬಲೋದ್ಧತರ ಪಾದಘಟ್ಟಣೆಯಿಂದಾಗಿ ದಿಕ್ಕುಗಳೆಲ್ಲ ಶಬ್ದಮಯವಾದುವು. ದೇವಸಮುದಯಕ್ಕೆ ಭಯವಾಯಿತು,

ಮುಂದುವರೆಯುವುದು



ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು



# ಪೈಲ್ವಾನರ ಭುಜ ಬಲಕ್ಕೆ ಮರದ ಪಾರಿಯ ಕಸರತ್ತು

ಬೆಳಗಿನ ಸೂರ್ಯ ಕಿರಣ ಕೆಮ್ಮಣ್ಣಿನ ಅಖಾಡಕ್ಕೆ ಬೀಳುತ್ತಿದ್ದಂತೆ ಅಲ್ಲೊಂದು ವಿಚಿತ್ರ ಸಂಗೀತ ಕೇಳಿಸುತ್ತದೆ. ಧಪ್ ಧಪ್ ಎಂಬ ಸದ್ದು, ಪೈಲ್ವಾನರ ಹುಂಕಾರ, ಗಾಳಿಯಲ್ಲಿ ತಿರುಗುವ ಮರದ ಪಾರಿಗಳ ಝೇಂಕಾರ. ಇದೇ ನಮ್ಮ ನೆಲದ ಜಿಮ್. ಇಲ್ಲಿ ಡಂಬೆಲ್ ಇಲ್ಲ, ಟ್ರೆಡ್‌ಮಿಲ್ ಇಲ್ಲ. ಇರುವುದು ಕೇವಲ ಬಲಿಷ್ಠ ತೇಗದ ಪಾರಿ ಮತ್ತು ಬೆವರಿನ ನಿಷ್ಠೆ. ಈ ಪಾರಿ ಎತ್ತಿದವನ ತೋಳುಗಳು ಬಂಡೆಯಾಗುತ್ತವೆ, ಎದೆ ಗುಡ್ಡವಾಗುತ್ತದೆ. ಅಖಾಡದಲ್ಲಿ ಎದುರಾಳಿ ಕುತ್ತಿಗೆ ಹಿಡಿದರೆ, ಈ ಪಾರಿಯಿಂದ ಗಟ್ಟಿಯಾದ ಮಣಿಕಟ್ಟು ಕಬ್ಬಿಣದ ಸಂಕೋಲೆಯಾಗುತ್ತದೆ. ಒಮ್ಮೆ ಹಿಡಿದರೆ ಬಿಡದು. ಕೆಳಗೆ ಬೀಳಿಸಲು ಬಂದರೆ, ಪಾರಿಯಿಂದ ಕಲಿತ ಸಮತೋಲನ ಪಾದವನ್ನು ನೆಲಕ್ಕೆ ಹೊಡೆದ ಮೊಳೆಯಂತಾಗಿಸುತ್ತದೆ. ಇದು ಕೇವಲ ವ್ಯಾಯಾಮವಲ್ಲ, ಧ್ಯಾನ. ಮನಸ್ಸು, ಮೈ, ಉಸಿರು ಒಂದಾದಾಗ ಮಾತ್ರ ಪಾರಿ ಮಾತು ಕೇಳುತ್ತದೆ. ಇಂದಿನ ಪಿಜ್ಜಾ-ಬರ್ಗರ್ ಪೀಳಿಗೆಗೆ ಪಾರಿ ಎಂದರೆ ಹಳೆಯ ಕಟ್ಟಿಗೆ.

ಆದರೆ ಇದೇ ಕಟ್ಟಿಗೆ ನಮ್ಮ ಅಜ್ಜಂದಿರಿಗೆ ವಜ್ರದ ದೇಹ ಕೊಟ್ಟಿತು.

ಅಡ್ಡಪರಿಣಾಮವಿಲ್ಲ, ಖರ್ಚಿಲ್ಲ, ಬರೀ ಶಿಸ್ತು ಸಾಕು. ಮರದ ಪಾರಿ ನಮ್ಮ ಅಖಾಡದ ಆತ್ಮ. ಅದರ ಝೇಂಕಾರ ಕೇಳಿದರೆ ಸಾಕು, ರಕ್ತ ಕುದಿಯುತ್ತದೆ.

ಈ ಸೊಗಡು ಉಳಿದರೆ ಮಾತ್ರ ನಮ್ಮ ಪೌರುಷ ಉಳಿಯುತ್ತದೆ.

## ಲಯವೂ ಮುಖ್ಯ

ಪಾರಿಯ ತಲೆ ಭಾರ, ಬುಡ ತೆಳ್ಳಗೆ. ಅದನ್ನು ಹಿಡಿದು ತಲೆಯ ಸುತ್ತ ಗಿರಗಿರನೆ ತಿರುಗಿಸಿದಾಗ ಭುಜದ ಕೀಲುಗಳಿಗೆ ಹೊಸ ಜೀವ ಬರುತ್ತದೆ. ಸ್ನಾಯುಗಳು ಉದ್ದವಾಗಿ, ಎದೆ ಅಗಲವಾಗಿ, ಮೈಕಟ್ಟು ಸಿಂಹದಂತಾಗುತ್ತದೆ. ಕೇವಲ ಬಲವಲ್ಲ, ಲಯವೂ ಮುಖ್ಯ. ಉಸಿರನ್ನು ತಾಳಕ್ಕೆ ತಕ್ಕಂತೆ ಎಳೆದು ಬಿಟ್ಟಾಗ ಎದೆಗೂಡು ತೆರೆದು ದಮ್ಮು ಹೆಚ್ಚುತ್ತದೆ. ಹತ್ತು ನಿಮಿಷದ ಕಾಳಗವಾದರೂ ಉಸಿರು ಕಟ್ಟದು.

# ದೇಶ ಭದ್ರತೆಯ ಜೋಜಿಲಾ ಸುರಂಗ ಕಾಮಗಾರಿಯಲ್ಲಿ ಐತಿಹಾಸಿಕ ಸಾಧನೆ

ಜಮ್ಮು-ಕಾಶ್ಮೀರ ಮತ್ತು ಲಡಾಖ್ ನಡುವಿನ ಸಂಪರ್ಕ ವ್ಯವಸ್ಥೆಯ ನವ ಅಧ್ಯಾಯ ಬರೆಯುವ ಜೋಜಿಲಾ ರಸ್ತೆ ಸುರಂಗ ಯೋಜನೆ ಮಹತ್ವದ ಮೈಲಿಗಲ್ಲು ತಲುಪಿದೆ. ಮೇಘಾ ಇಂಜಿನಿಯರಿಂಗ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಸಂಸ್ಥೆಯು 13.153 ಕಿಲೋ ಮೀಟರ್ ಉದ್ದದ ಜೋಜಿಲಾ ಸುರಂಗದ ಅಂತಿಮ ಭೇಧ (ಬ್ರೇಕ್ ಥ್ರೂ) ಸಾಧಿಸುವ ಮೂಲಕ ವಿಶ್ವದ ಅತಿ ಎತ್ತರದಲ್ಲಿ ನಿರ್ಮಾಣವಾಗುತ್ತಿರುವ ಅತಿ ಉದ್ದದ ಏಕ-ಕೊಳವೆ ದ್ವಿಮುಖ ರಸ್ತೆ ಸುರಂಗದ ಉತ್ಖನನ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ (ಎನ್‌ಎಚ್‌ಐಡಿಸಿಎಲ್) ಪರವಾಗಿ ಎಂಇಐಎಲ್ ಈ ಮಹತ್ವಾಕಾಂಕ್ಷಿ ಯೋಜನೆಯನ್ನು ಕೈಗೊಂಡಿದ್ದು, ಬಾಲ್ತಾಲ್ ಮತ್ತು ಮೀನಮಾರ್ಗ್ ನಡುವಿನ ಹಿಮಾಲಯದ ತಂತ್ರಾತ್ಮಕ ಮಾರ್ಗದಲ್ಲಿ ವರ್ಷ ಪೂರ್ತಿ ಸಂಪರ್ಕ ಕಲ್ಪಿಸುವ ಉದ್ದೇಶದ ಕನಸನ್ನು ಇದು ನನಸಾಗಿಸಲಿದೆ.
ಸಮುದ್ರ ಮಟ್ಟದಿಂದ ಸುಮಾರು 11,578 ಅಡಿ ಎತ್ತರದಲ್ಲಿರುವ ಜೋಜಿಲಾ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಈ ಸುರಂಗವು ಅತ್ಯಂತ ಕಠಿಣ ಭೌಗೋಳಿಕ ಹಾಗೂ ಹವಾಮಾನ ಪರಿಸ್ಥಿತಿಗಳ ನಡುವೆ ಸಾಕಾರಗೊಳ್ಳುತ್ತಿದೆ. ಯೋಜನೆ ಪೂರ್ಣಗೊಂಡ ಬಳಿಕ ಶ್ರೀನಗರ-ಕಾರ್ಗಿಲ್-ಲೇಹ್ ರಾಷ್ಟ್ರೀಯ ಹೆದ್ದಾರಿಯಲ್ಲಿ ವರ್ಷಪೂರ್ತಿ ಸಂಚಾರ ಸಾಧ್ಯವಾಗಲಿದ್ದು, ಭಾರೀ ಹಿಮಪಾತ ಹಾಗೂ ಹಿಮಕುಸಿತದಿಂದ ಉಂಟಾಗುತ್ತಿದ್ದ ದೀರ್ಘಕಾಲದ ರಸ್ತೆ ಬಂದ್ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ.

ಬಾಲ್ತಾಲ್‌ನ ಪಶ್ಚಿಮ ಪ್ರವೇಶ ದ್ವಾರದಿಂದ ಮೀನಮಾರ್ಗ್‌ನ ಪೂರ್ವ ಪ್ರವೇಶ ದ್ವಾರದವರೆಗೆ ನಿರ್ಮಾಣವಾಗುತ್ತಿರುವ ಮುಖ್ಯ ಸುರಂಗದ ಉತ್ಖನನವನ್ನು ಎರಡೂ ತುದಿಗಳಿಂದ ಏಕಕಾಲದಲ್ಲಿ ನಡೆಸಲಾಗಿತ್ತು. ಇದೀಗ ಅಂತಿಮ ಭೇದ (ಬ್ರೇಕ್‌ಥ್ರೂ) ಸಾಧನೆಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಾದ ನಿತಿನ್ ಗಡ್ಕರಿ ಸಾಕ್ಷಿಯಾದರು. ಇದರಿಂದ ಅತ್ಯಂತ ಸವಾಲಿನ ಉತ್ಖನನ ಹಂತ ಯಶಸ್ವಿಯಾಗಿ ಪೂರ್ಣಗೊಂಡಿದೆ. ಯೋಜನೆಯಲ್ಲಿ ನ್ಯೂ ಆಸ್ಟ್ರಿಯನ್ ಟನಲಿಂಗ್ ವಿಧಾನ (ಎನ್‌ಎಟಿಎಂ) ಅಳವಡಿಸಲಾಗಿದ್ದು, ಬದಲಾಗುವ ಶಿಲಾಸ್ತರಗಳು ಮತ್ತು ಭೌಗೋಳಿಕ ಅನಿಶ್ಚಿತತೆಗಳಿಗೆ ಹೊಂದಿಕೊಳ್ಳುವ ಈ ತಂತ್ರಜ್ಞಾನ ಸುರಕ್ಷಿತ ಹಾಗೂ ಸ್ಥಿರ ಸುರಂಗ ನಿರ್ಮಾಣಕ್ಕೆ ನೆರವಾಗಿದೆ. ನಿರಂತರ ಮೇಲ್ವಿಚಾರಣೆ, ತಕ್ಷಣದ ಬೆಂಬಲ ವ್ಯವಸ್ಥೆಗಳು ಮತ್ತು ವೈಜ್ಞಾನಿಕ ಮೌಲ್ಯಮಾಪನಗಳ ಮೂಲಕ ಸಂಕೀರ್ಣ ಹಿಮಾಲಯದ ಭೂಪ್ರದೇಶದಲ್ಲಿಯೂ ಕಾಮಗಾರಿ ಯಶಸ್ವಿಯಾಗಿ ಮುಂದುವರಿಯಿತು. ಮುಖ್ಯ ಸುರಂಗದ ಜೊತೆಗೆ ಸಂಪರ್ಕ ರಸ್ತೆಗಳು, ಸೇತುವೆಗಳು, ಹಿಮರಕ್ಷಣೆ ವ್ಯವಸ್ಥೆಗಳು, ಕಟ್-ಅಂಡ್-ಕವರ್ ವಿಭಾಗಗಳು ಹಾಗೂ ಇತರೆ ಸುರಂಗ ಮೂಲಸೌಕರ್ಯಗಳ ನಿರ್ಮಾಣವೂ ಯೋಜನೆಯ ಭಾಗವಾಗಿದೆ. ಈ ಯೋಜನೆಯಿಂದ ಪ್ರವಾಸೋದ್ಯಮ, ವ್ಯಾಪಾರ, ಅಗತ್ಯ ಸೇವೆಗಳು ಮತ್ತು ಗಡಿ ಪ್ರದೇಶಗಳ ಸಂಪರ್ಕ ವ್ಯವಸ್ಥೆಗೆ ಮಹತ್ತರ ಉತ್ತೇಜನ ಸಿಗಲಿದೆ.ಹಲವು ಸಂಕೀರ್ಣ ಪರಿಸ್ಥಿತಿಯಲ್ಲೂ ನಿರ್ದಿಷ್ಟ ಅವಧಿಯಲ್ಲಿ ಕಾಮಗಾರಿ ಪೂರೈಸಿರುವ ಎಂಇಐಎಲ್ ಕಾರ್ಯಕಾರಿ ನಿರ್ದೇಶಕ ಕೃಷ್ಣರೆಡ್ಡಿ ಮತ್ತು ಯೋಜನಾ ವ್ಯವಸ್ಥಾಪಕ ಹರ್‌ಪಾಲ್ ಸಿಂಗ್ ಅವರ ಕಾರ್ಯವೈಖರಿಯನ್ನು ಶ್ಲಾಘಿಸಿ, ಆರಂಭದಲ್ಲಿ ಈ ಯೋಜನೆಗೆ 12 ಸಾವಿರ ಕೋಟಿ ರೂ. ವ್ಯಯಿಸುವ ಡಿಪಿಆರ್ ಸಿದ್ಧಪಡಿಸಲಾಗಿತ್ತು. ನಾಲ್ಕು ಬಾರಿ ಟೆಂಡರ್ ಆಹ್ವಾನಿಸಿದರೂ ಕಾರ್ಯಸಾಧುವಾಗಿರಲಿಲ್ಲ, ನಂತರ ಎಂಇಐಎಲ್ ಕಡಿಮೆ ಮೊತ್ತಕ್ಕೆ ಕಾಮಗಾರಿ ಕೈಗೊಂಡ ಪರಿಣಾಮ ಸರ್ಕಾರವು ಅಂದಾಜು 4 ಸಾವಿರ ಕೋಟಿ ರೂ.ಗಳನ್ನು ಉಳಿಸುವಂತಾಯಿತು ಎಂದರು.

ಜಮ್ಮು-ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಮಾತನಾಡಿ, ಲಡಾಖ್ ಮತ್ತು ಜಮ್ಮು-ಕಾಶ್ಮೀರ ಜನರ ಬಹುಕಾಲದ ಕನಸು ನನಸಾಗಿದೆ. ಉತ್ತಮ ಸಾರಿಗೆ, ಪ್ರವಾಸೋದ್ಯಮ ಮತ್ತು ಹೊಸ ಆರ್ಥಿಕ ಅವಕಾಶಗಳ ಮೂಲಕ ಈ ಸುರಂಗ ಪ್ರದೇಶದ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಿದೆ'' ಎಂದರು.





## ಮೂಲಸೌಕರ್ಯ ಇತಿಹಾಸದಲ್ಲಿ ಐತಿಹಾಸಿಕ ದಿನ

ಈ ಸಾಧನೆ ಕುರಿತು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಾದ ನಿತಿನ್ ಗಡ್ಕರಿ ಪ್ರತಿಕ್ರಿಯಿಸಿ, ''ಭಾರತದ ಮೂಲಸೌಕರ್ಯ ಇತಿಹಾಸದಲ್ಲಿ ಇದು ಐತಿಹಾಸಿಕ ದಿನವಾಗಿದೆ. ಜೋಜಿಲಾ ಸುರಂಗ ಪೂರ್ಣಗೊಂಡ ಬಳಿಕ ವಿಶ್ವದಾಖಲೆ ನಿರ್ಮಿಸಲಿದೆ. ಇದು ಲಡಾಖ್ ಮತ್ತು ಜಮ್ಮು-ಕಾಶ್ಮೀರದ ಜನರಿಗೆ ಜೀವನಾಡಿಯಾಗಲಿದೆ. ಮೈನಸ್ 4 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲೂ ಇಂಜಿನಿಯರ್‌ಗಳು ಮತ್ತು ಕಾರ್ಮಿಕರು ಹಗಲಿರುಳು ಶ್ರಮಿಸಿ ಈ ಸಾಧನೆ ಮಾಡಿದ್ದಾರೆ. ಯೋಜನೆಯಲ್ಲಿ ಶೇ.80ರಷ್ಟು ಸ್ಥಳೀಯರು ಕೆಲಸ ನಿರ್ವಹಿಸಿರುವುದು ವಿಶೇಷ'' ಎಂದು ಹರ್ಷ ವ್ಯಕ್ತಪಡಿಸಿದರು.

### ಯೋಜನೆಯ ಪ್ರಮುಖ ಅಂಶಗಳು

ಜೋಜಿಲಾ ಸುರಂಗದ ಉದ್ದ: 13.153 ಕಿ.ಮೀ.
ಒಟ್ಟು ಯೋಜನಾ ಉದ್ದ: 30.894 ಕಿ.ಮೀ. ಸ್ಥಳ: ಬಾಲ್ತಾಲ್-ಮೀನಮಾರ್ಗ್, ಜಮ್ಮು-ಕಾಶ್ಮೀರ ಮತ್ತು ಲಡಾಖ್
ನಿರ್ಮಾಣ ಸಂಸ್ಥೆ: ಎಂಇಐಎಲ್
ಗ್ರಾಹಕ ಸಂಸ್ಥೆ: ಎನ್‌ಎಚ್ ಐಡಿಸಿಎಲ್
ನಿರ್ಮಾಣ ವಿಧಾನ: ಎನ್ ಎಟಿಎಂ
ಉದ್ದೇಶ: ಶ್ರೀನಗರ-ಲಡಾಖ್ ನಡುವೆ 365 ದಿನ ಸಂಪರ್ಕ
ಸುರಕ್ಷತಾ ಸಾಧನೆ: 1 ಕೋಟಿ ಸುರಕ್ಷಿತ ಮಾನವ-ಗಂಟೆಗಳು
ಪ್ರಮುಖ ಮೈಲಿಗಲ್ಲುಗಳು ಯೋಜನೆ ಆರಂಭ: ಅಕ್ಟೋಬರ್ 1, 2020
ನಿಲ್ಗಾರ್ ಸುರಂಗದಲ್ಲಿ ಮೊದಲ ಸ್ಫೋಟ: ಅಕ್ಟೋಬರ್ 14, 2020
ಮೊದಲ ಹಂತದ ಕಾಮಗಾರಿ ಪೂರ್ಣ: ಮಾರ್ಚ್ 15, 2025
ಜೋಜಿಲಾ ಮುಖ್ಯ ಸುರಂಗದ ಅಂತಿಮ ಬ್ರೇಕ್‌ಥ್ರೂ: ಜೂನ್ 9, 2026 ವಿಶ್ವದ ಅತಿ ಎತ್ತರದ ಮತ್ತು ಅತಿ ಉದ್ದದ ಏಕ-ಕೊಳವೆ (ಟ್ಯೂಬ್) ದ್ವಿಮುಖ ರಸ್ತೆ ಸುರಂಗವಾಗಿ ಹೊರಹೊಮ್ಮುತ್ತಿರುವ ಜೋಜಿಲಾ ಯೋಜನೆ, ಉತ್ತರ ಭಾರತದ ಸಂಪರ್ಕ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಿದ್ದು, ಕಾಶ್ಮೀರ-ಲಡಾಖ್ ಅಭಿವೃದ್ಧಿಗೆ ಹೊಸ ವೇಗ ನೀಡಲಿದೆ.

**ನಾಯಕತ್ವ ಬದಲಾವಣೆಯಿಂದ ಅಭಿವೃದ್ಧಿಗೆ ವೇಗ ಸಿಗುವ ಸಾಧ್ಯತೆ ಇದೆ. ಜನರ ಸಮಸ್ಯೆಗಳಿಗೆ ಹೊಸ ದೃಷ್ಟಿಕೋನದಿಂದ ಪರಿಹಾರ ಕಂಡುಕೊಳ್ಳಲು ಅವಕಾಶ ದೊರೆಯುತ್ತದೆ. ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ಹಾಗೂ ಉದ್ಯೋಗ ಸೃಷ್ಟಿಕ್ಷೇತ್ರಗಳಲ್ಲಿ ಹೊಸ ಯೋಜನೆಗಳು ಜಾರಿಯಾಗಬಹುದು. ಇದರಿಂದ ಜನರ ಜೀವನಮಟ್ಟ ಸುಧಾರಿಸುವ ಸಾಧ್ಯತೆಯೂ ಇದೆ.**

# ರಾಜಕೀಯ ನಾಯಕತ್ವ ಬದಲಾವಣೆ: ಅಭಿವೃದ್ಧಿಗೆ ವೇಗವೇ ಅಥವಾ ಹೊಸ ಸವಾಲೇ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ನಾಯಕತ್ವ ಬದಲಾವಣೆ ಸಾಮಾನ್ಯ ಪ್ರಕ್ರಿಯೆಯಾಗಿದೆ. ಹೊಸ ನಾಯಕರು ಅಧಿಕಾರಕ್ಕೆ ಬಂದಾಗ ಜನರಲ್ಲಿ ಹೊಸ ನಿರೀಕ್ಷೆಗಳು ಮೂಡುತ್ತವೆ. ಅಭಿವೃದ್ಧಿ ಕಾರ್ಯಗಳಿಗೆ ಹೊಸ ಚೈತನ್ಯ ಸಿಗಬಹುದು ಎಂಬ ಆಶಾಭಾವನೆ ಮೂಡುತ್ತದೆ. ಹೊಸ ನಾಯಕತ್ವವು ಹೊಸ ಆಲೋಚನೆಗಳು, ಯೋಜನೆಗಳು ಹಾಗೂ ಕಾರ್ಯತಂತ್ರಗಳ ಮೂಲಕ ಆಡಳಿತದಲ್ಲಿ ಚುರುಕುತನ ತರಲು ಪ್ರಯತ್ನಿಸುತ್ತದೆ.

ಆದರೆ ನಾಯಕತ್ವ ಬದಲಾವಣೆ ಕೆಲವು ಸವಾಲುಗಳನ್ನೂ ಸೃಷ್ಟಿಸಬಹುದು. ಹಿಂದಿನ ಸರ್ಕಾರದ ಯೋಜನೆಗಳಲ್ಲಿ ಬದಲಾವಣೆ ಅಥವಾ ಸ್ಥಗಿತ ಉಂಟಾದರೆ ಅಭಿವೃದ್ಧಿ ಕಾರ್ಯಗಳ ನಿರಂತರತೆಗೆ ಧಕ್ಕೆಯಾಗಬಹುದು. ಕೆಲವೊಮ್ಮೆ ರಾಜಕೀಯ ಭಿನ್ನಾಭಿಪ್ರಾಯಗಳು ಮತ್ತು ಅಧಿಕಾರದ ಪೈಪೋಟಿಗಳು ಆಡಳಿತದ ಮೇಲೆ ಪರಿಣಾಮ ಬೀರುತ್ತವೆ. ಇಂತಹ ಸಂದರ್ಭಗಳಲ್ಲಿ ಜನರ ನಿರೀಕ್ಷೆಗಳು ಈಡೇರದೆ ಉಳಿಯುವ ಸಾಧ್ಯತೆಯೂ ಇದೆ.

ಹೀಗಾಗಿ ನಾಯಕತ್ವ ಬದಲಾವಣೆ ಮಾತ್ರ ಅಭಿವೃದ್ಧಿಯ ಭರವಸೆ ನೀಡುವುದಿಲ್ಲ. ಹೊಸ ನಾಯಕತ್ವದ ಕಾರ್ಯಕ್ಷಮತೆ, ಪಾರದರ್ಶಕತೆ ಹಾಗೂ ಜನಪರ ಆಡಳಿತವೇ ಅದರ ಯಶಸ್ಸನ್ನು ನಿರ್ಧರಿಸುತ್ತದೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ, ಅಭಿವೃದ್ಧಿಯ ನಿರಂತರತೆಯನ್ನು ಕಾಪಾಡುವ ಹಾಗೂ ದೂರದೃಷ್ಟಿಯ ಯೋಜನೆಗಳನ್ನು ರೂಪಿಸುವ ನಾಯಕತ್ವವೇ ನಿಜವಾದ ಅಭಿವೃದ್ಧಿಗೆ ಕಾರಣವಾಗುತ್ತದೆ.



ಒಟ್ಟಾರೆ, ರಾಜಕೀಯ ನಾಯಕತ್ವ ಬದಲಾವಣೆ ಅಭಿವೃದ್ಧಿಗೆ ಅವಕಾಶವೂ ಹೌದು, ಸವಾಲೂ ಹೌದು. ಅದರ ಫಲಿತಾಂಶ ನಾಯಕತ್ವದ ಗುಣಮಟ್ಟ ಮತ್ತು ಆಡಳಿತದ ದಕ್ಷತೆಯ ಮೇಲೆ ಅವಲಂಬಿತವಾಗಿರುತ್ತದೆ.

# ಮಿಂಚಿನ ದಾಳಿಯಿಂದ ತಪ್ಪಿಸಿಕೊಳ್ಳಿ

ಭಾರತದಲ್ಲಿ ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ಸಾವುಗಳಿಗೆ ಮಿಂಚಿನ ಹೊಡೆತವು ಪ್ರಮುಖ ಕಾರಣವಾಗಿದೆ. ಪ್ರತಿವರ್ಷ ದೇಶಾದ್ಯಂತ ಸುಮಾರು 1,500 ರಿಂದ 2,000 ಜನರು ಮಿಂಚಿನಿಂದ ಮೃತಪಡುತ್ತಾರೆ. ಇದು ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ಎಲ್ಲಾ ಸಾವುಗಳಲ್ಲಿ ಸುಮಾರು ಶೇ.35 ರಿಂದ 40 ರಷ್ಟಿದೆ. ಪಲ್ನಾಡು ಜಿಲ್ಲೆಯಲ್ಲಿ ವಾರ್ಷಿಕವಾಗಿ 15 ರಿಂದ 20 ಜನರು ಮಿಂಚಿನ ಹೊಡೆತಕ್ಕೆ ಬಲಿಯಾಗುತ್ತಾರೆ ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ತಿಳಿಸುತ್ತಾರೆ. ಭಾರೀ ಮಳೆಯೊಂದಿಗೆ ಸಿಡಿಲು ಬಡಿದು ಅನೇಕ ಕುಟುಂಬಗಳು ತೀವ್ರ ತೊಂದರೆಗಳನ್ನು ಎದುರಿಸುತ್ತವೆ.

ವಿಶೇಷವಾಗಿ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಕೃಷಿ ಕಾರ್ಮಿಕರು, ರೈತರು ಮತ್ತು ಜಾನುವಾರು ಮೇಯಿಸುವವರು ಸಿಡಿಲು ಬಡಿತದಿಂದ ಹೆಚ್ಚು ಪರಿಣಾಮ ಬೀರುತ್ತಾರೆ. ಬಿರುಗಾಳಿಯ ಸಮಯದಲ್ಲಿ ಹೆಚ್ಚುವರಿ ಎಚ್ಚರಿಕೆ ವಹಿಸುವಂತೆ ಅಧಿಕಾರಿಗಳು ಸಾರ್ವಜನಿಕರನ್ನು ಎಚ್ಚರಿಕೆ ನೀಡಿದ್ದಾರೆ. ಹವಾಮಾನ ಇಲಾಖೆಯ ಪ್ರಕಾರ, ಎಲ್ ನಿನೋ ಪ್ರಭಾವದಿಂದಾಗಿ ಹವಾಮಾನ ಪರಿಸ್ಥಿತಿಗಳು ತೀವ್ರ ಬದಲಾವಣೆಗಳಿಗೆ ಒಳಗಾಗಿವೆ. ಪ್ರಸ್ತುತ ಹಗಲಿನ ತಾಪಮಾನವು 45ಅ ಹಾಗೂ 48ಅ ನಡುವೆ ದಾಖಲಾಗುತ್ತಿದೆ. ಹಾಗೂ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಹಗುರ ಮಳೆ ಮತ್ತು ಗುಡುಗು ಸಹಿತ ಮಳೆಯಾಗಿದೆ. ತೀವ್ರ ಶಾಖದ ಅಲೆಗಳ ಪರಿಸ್ಥಿತಿ ಇದೆ. ಮುಂದಿನ ವಾರದಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಡಬಹುದು ಎಂದು ಹವಾಮಾನ ಇಲಾಖೆ ತಿಳಿಸಿದೆ. ಮಿಂಚಿನ ಹೊಡೆತಗಳನ್ನು ತಪ್ಪಿಸಲು ಜನರು ಜಾಗರೂಕರಾಗಿರಲು ಸೂಚಿಸಲಾಗಿದೆ.ಮಳೆ ಮಾಹಿತಿಗಾಗಿ 'ಮೇಘದೂತ್' ಅಪ್ಲಿಕೇಶನ್ ಭಾರತ ಹವಾಮಾನ ಇಲಾಖೆ ಭಾರತೀಯ ಉಷ್ಣವಲಯದ ಹವಾಮಾನ ಸಂಸ್ಥೆ ಮತ್ತು ಖಅಂಖ ಜಂಟಿಯಾಗಿ ಅಭಿವೃದ್ಧಿಪಡಿಸಿದ 'ಮೇಘದೂತ್' ಅಪ್ಲಿಕೇಶನ್ ಮೂಲಕ ನೀವು ಮಳೆಯ ಬಗ್ಗೆ ಮುಂಚಿತವಾಗಿ ಮಾಹಿತಿಯನ್ನು ಪಡೆಯಬಹುದು. ನಿಮ್ಮ ಫೋನ್ ಸಂಖ್ಯೆ, ರಾಜ್ಯ, ಜಿಲ್ಲೆ, ಬ್ಲಾಕ್ ಹಾಗೂ ಪಂಚಾಯತ್‌ನಂತಹ ವಿವರಗಳನ್ನು ನಮೂದಿಸುವ ಮೂಲಕ ಲಾಗಿನ್ ಮಾಡಿ. ಇದು ಮಳೆ, ತಾಪಮಾನ, ಗಾಳಿಯ ವೇಗ, ಗಾಳಿಯ ದಿಕ್ಕು, ಆರ್ದ್ರತೆಯ ಮಟ್ಟಗಳ ಕುರಿತು ನೈಜ ಸಮಯದ ಮಾಹಿತಿಯನ್ನು ಒದಗಿಸುತ್ತದೆ. 500 ಮೀಟರ್‌ನಲ್ಲಿ ಮಿಂಚಿನ ಎಚ್ಚರಿಕೆ ನೀಡುವ 'ದಾಮಿನಿ ಪ್ರತಿವರ್ಷ ಸಿಡಿಲಿನಿಂದ 20ಕ್ಕೂ ಹೆಚ್ಚು ಜನರು ಮತ್ತು ನೂರಾರು ಪ್ರಾಣಿಗಳು ಸಾಯುತ್ತವೆ.

# ತೂಕ ಇಳಿಯುತ್ತಿಲ್ಲವೇ? ನೀವು ಮಾಡುತ್ತಿರುವ ಈ 7 ಡಯಟ್ ತಪ್ಪುಗಳೇ ಕಾರಣವಾಗಿರಬಹುದು!

ಇಂದಿನ ಜೀವನ ಶೈಲಿಯಲ್ಲಿ ಹೆಚ್ಚುತ್ತಿರುವ ತೂಕವು ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳು ರಕ್ತದೊತ್ತಡ ಮತ್ತು ಇತರ ಜೀವನಶೈಲಿ ಕಾಯಿಲೆಗಳಿಗೆ ಪ್ರಮುಖ ಕಾರಣವಾಗುತ್ತಿದೆ. ಇದರಿಂದಾಗಿ ಅನೇಕರು ತೂಕ ಇಳಿಸಿಕೊಳ್ಳಲು ಡಯಟ್, ವ್ಯಾಯಾಮ ಮತ್ತು ವಿವಿಧ ಆರೋಗ್ಯಪೂರ್ಣ ಆಹಾರ ಸೇವಿಸುವ ಕ್ರಮ ಅನುಸರಿಸುತ್ತಿದ್ದಾರೆ. ಆದರೆ ಸಾಕಷ್ಟು ಪ್ರಯತ್ನಗಳ ಬಳಿಕವೂ ಕೆಲವರಿಗೆ ತೂಕ ಕಡಿಮೆಯಾಗುವುದಿಲ್ಲ. ಇದಕ್ಕೆ ಕಾರಣ ಕೇವಲ ಹೆಚ್ಚು ಆಹಾರ ಸೇವನೆ ಮಾತ್ರವಲ್ಲ, ಆಹಾರ ಪದ್ಧತಿಯಲ್ಲಿ ತಿಳಿಯದೆ ಮಾಡುವ ಕೆಲವು ಸಾಮಾನ್ಯ ತಪ್ಪುಗಳೂ (ಆಗಿರಬಹುದು.

ತಜ್ಞರ ಪ್ರಕಾರ, ತೂಕ ನಿಯಂತ್ರಣವು ಕೇವಲ ಕ್ಯಾಲೊರಿಗಳನ್ನು ಕಡಿಮೆ ಮಾಡುವ ವಿಚಾರವಲ್ಲ, ದೇಹದ ಚಯಾಪಚಯ ಕ್ರಿಯೆ (ಮೆಟಾಬಾಲಿಸಂ), ಹಾರ್ಮೋನ್‌ಗಳ ಸಮತೋಲನ, ದೈನಂದಿನ ಕ್ಯಾಲೊರಿ ಬಳಕೆ ಮತ್ತು ಪೌಷ್ಟಿಕಾಂಶಗಳ ಸೇವನೆ ಇವೆಲ್ಲವೂ ಪ್ರಮುಖ ಪಾತ್ರ ವಹಿಸುತ್ತವೆ. ಕೆಲವೊಮ್ಮೆ ಆರೋಗ್ಯಪೂರ್ಣ ಆಹಾರ ಸೇವಿಸುತ್ತಿದ್ದೇವೆ ಎಂದು ಭಾವಿಸಿದರೂ, ಕೆಲವು ತಪ್ಪು ಅಭ್ಯಾಸಗಳಿಂದ ತೂಕ ಇಳಿಯುವ ಬದಲು ಹೆಚ್ಚಾಗುವ ಸಾಧ್ಯತೆಯೂ ಇದೆ. ಹೀಗಾಗಿ ತೂಕ ಇಳಿಸಿಕೊಳ್ಳಲು ಬಯಸುವವರು ಈ ಸಾಮಾನ್ಯ ಡಯಟ್ ತಪ್ಪುಗಳ ಬಗ್ಗೆ ತಿಳಿದುಕೊಂಡು, ಅವುಗಳನ್ನು ಸರಿಪಡಿಸಿಕೊಳ್ಳುವುದು ಅಗತ್ಯ. ಬೇಗ ತೂಕ ಇಳಿಸಿಕೊಳ್ಳಬೇಕು ಎಂಬ ಕಾರಣಕ್ಕೆ ಹಲವರು ಆಹಾರದ ಪ್ರಮಾಣವನ್ನು ಅತಿಯಾಗಿ ಕಡಿಮೆ ಮಾಡುತ್ತಾರೆ. ಆದರೆ ಇದರಿಂದ ದೇಹದ ಚಯಾಪಚಯ ಕ್ರಿಯೆ ನಿಧಾನವಾಗಬಹುದು. ದೇಹಕ್ಕೆ ಅಗತ್ಯವಾದ ಪೌಷ್ಟಿಕಾಂಶಗಳು ಸಿಗದಿದ್ದರೆ ದೇಹ ಶಕ್ತಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತದೆ.

ಪರಿಣಾಮವಾಗಿ ತೂಕ ಇಳಿಕೆಯ ಪ್ರಕ್ರಿಯೆ ನಿಧಾನವಾಗಬಹುದು. ಬೆಳಗಿನ ಉಪಾಹಾರ ಅಥವಾ ಮಧ್ಯಾಹ್ನದ ಊಟ ಬಿಟ್ಟುಬಿಡುವುದು ತೂಕ ಇಳಿಕೆಗೆ ಸಹಾಯ ಮಾಡುತ್ತದೆ ಎಂದು ಹಲವರು ಭಾವಿಸುತ್ತಾರೆ. ಆದರೆ ಈ ಅಭ್ಯಾಸವು ನಂತರ ಅತಿಯಾಗಿ ತಿನ್ನುವಂತೆ ಮಾಡುತ್ತದೆ. ಜತೆಗೆ ರಕ್ತದಲ್ಲಿನ ಸಕ್ಕರೆ ಮಟ್ಟದಲ್ಲಿ ಏರಿಳಿತ ಉಂಟಾಗಿ ಹಸಿವಿನ ಹಾರ್ಮೋನ್‌ಗಳ ಮೇಲೂ ಪರಿಣಾಮ ಬೀರುತ್ತದೆ. ಡ್ರೈ ಫ್ರೂಟ್ಸ್, ಗ್ರಾನೋಲಾ, ಸ್ಮೂಥಿ ಹಾಗೂ ಪೀನಟ್ ಬಟರ್‌ನಂತಹ ಆಹಾರಗಳು ಆರೋಗ್ಯಕ್ಕೆ ಪೂರಕವಾಗಿದ್ದರೂ ಹೆಚ್ಚಿನ ಕ್ಯಾಲೊರಿಗಳನ್ನು ಹೊಂದಿರುತ್ತವೆ. ಹೆಲ್ತಿ ಎಂಬ ಕಾರಣಕ್ಕೆ ಮಿತಿಮೀರಿ ಸೇವಿಸಿದರೆ ತೂಕ ಹೆಚ್ಚಾಗುವ ಸಾಧ್ಯತೆ ಇದೆ. ಆದ್ದರಿಂದ ಪ್ರಮಾಣ ನಿಯಂತ್ರಣ ಬಹಳ ಮುಖ್ಯ. ಪ್ರೊಟೀನ್ ದೀರ್ಘಕಾಲ ಹೊಟ್ಟೆ ತುಂಬಿದ ಅನುಭವ ನೀಡುವುದರ ಜತೆಗೆ ದೇಹದ ಮೆಟಾಬಾಲಿಸಂ ಹೆಚ್ಚಿಸಲು ಸಹಾಯ ಮಾಡುತ್ತದೆ.



ಪತಂಜಲಿ ಯೋಗ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಂಘ-ಸಂಸ್ಥೆಗಳ ಪದಾಧಿಕಾರಿಗಳಿಗೆ ಜವಾಬ್ದಾರಿ ಯೋಗ ದಿನಾಚರಣೆಯ ಬಗ್ಗೆ ಯುವಜನತೆ, ಶಾಲಾ-ಕಾಲೇಜು ವಿದ್ಯಾರ್ಥಿಗಳು

# ವಿಶ್ವ ಯೋಗ ದಿನಾಚರಣೆಗೆ ಸಕಲ ಸಿದ್ಧತೆ : ಶಾಸಕ ಲಕ್ಷ್ಮಣ ಸವದಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ

• ಉದಯವಾಹಿನಿ, ಅಥಣಿ :

1 : ಸಭೆಯ ಪ್ರಮುಖ ನಿರ್ಣಯಗಳು
2 : ಸಮಿತಿಗಳ ರಚನೆ
3 : ಭಾಗವಹಿಸುವಿಕೆ
4 : ವ್ಯಾಪಕ ಪ್ರಚಾರ

ಯಾವುದೇ ಜಾತಿ ಮತ ಪಂಥ ಧರ್ಮವೆನ್ನದೆ ಕಲುಷಿತ ಗಾಳಿ, ನೀರು, ಆಹಾರ ಸೇವಿಸುವ ಪ್ರತಿಯೊಬ್ಬ ಮನುಷ್ಯನಿಗೆ ಇಂದು ಯೋಗ ಅಗತ್ಯವಾಗಿರಬೇಕು. ಆರೋಗ್ಯಪೂರ್ಣ ಸಮಾಜದ ನಿರ್ಮಾಣ ನಮ್ಮೆಲ್ಲರ ಆದ್ಯತೆಯಾಗಬೇಕು. ಪ್ರತಿಯೊಬ್ಬ ವ್ಯಕ್ತಿಯು ಉತ್ತಮ ಆರೋಗ್ಯ ಹೊಂದಲಿ ಎಂಬ ಉದ್ದೇಶದಿಂದ ಅಥಣಿ ಪಟ್ಟಣದಲ್ಲಿ ಜೂನ್ 21ರಂದು ವಿಶ್ವ ಯೋಗ ದಿನವನ್ನು ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಮಾಜಿ ಉಪಮುಖ್ಯಮಂತ್ರಿ ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ವಿಶ್ವ ಯೋಗ ದಿನ

ಅಥಣಿಯಲ್ಲಿ ಜೂನ್ 21 ರಂದು ನಡೆಯಲಿರುವ 'ಅಂತರಾಷ್ಟ್ರೀಯ ವಿಶ್ವ ಯೋಗ ದಿನಾಚರಣೆ'ಯ ಹಿನ್ನೆಲೆಯಲ್ಲಿ ಅಥಣಿ ಶಾಸಕ ಲಕ್ಷ್ಮಣ ಸವದಿಯವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಆಡಳಿತ ಹಾಗೂ ಅಥಣಿ ಪತಂಜಲಿ ಯೋಗ ಸಮಿತಿಯ ಸಹಯೋಗದೊಂದಿಗೆ ಯೋಗ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತು ವಿಶೇಷ ಪೂರ್ವಭಾವಿ ಸಭೆ ಜರುಗಿತು.

ಅಥಣಿಯಲ್ಲಿ ಅರ್ಥಪೂರ್ಣ ಹಾಗೂ ವೈಭವಯುತವಾಗಿ ಪ್ರತಿಯೊಬ್ಬರ ಸಹಯೋಗದೊಂದಿಗೆ ಯೋಗ ದಿನ ಆಚರಿಸಲು ನಿರ್ಧರಿಸಲಾಯಿತು. ಕಳೆದ ಬಾರಿ ಸುಮಾರು ನಾಲ್ಕು ಸಾವಿರ ಜನರ ಸಹಯೋಗದೊಂದಿಗೆ ಬೃಹತ್ ಕಾರ್ಯಕ್ರಮ ಯಶಸ್ವಿಯಾಗಿ ಹಮ್ಮಿಕೊಂಡಿದ್ದೆವು.

ಈ ವರ್ಷವೂ ಕೂಡ ಕಾರ್ಯಕ್ರಮಕ್ಕೆ ಅಗತ್ಯವಿರುವ ವೇದಿಕೆ ಸಿದ್ಧತೆ, ಧ್ವನಿವರ್ಧಕ, ಸ್ಕ್ರೀನ್ ಅಳವಡಿಕೆ ವಿವಿಧ ರೀತಿಯ ಉಪಹಾರ ವ್ಯವಸ್ಥೆ ಚಹಾ ಪಾನೀಯ ಸಂಪೂರ್ಣ ಸಹಕಾರವನ್ನು ನಾನು ನೀಡುತ್ತೇನೆ ಎಂದು ಶಾಸಕ ಲಕ್ಷ್ಮಣ ಸವದಿ ಅವರು ಅಭಯ ಹಸ್ತವನ್ನು ನೀಡಿದರು. ಯೋಗ ದಿನಾಚರಣೆಯ ಬಗ್ಗೆ ಯುವಜನತೆ, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಸಂಘ ಸಂಸ್ಥೆಗಳು, ತಾಲ್ಲೂಕು ಪತ್ರಕರ್ತರ ಸಂಘ, ಶಿಕ್ಷಣ, ಕಂದಾಯ, ಪೊಲೀಸ್, ಸೇರಿದಂತೆ ತಾಲ್ಲೂಕ ಆಡಳಿತದ ಎಲ್ಲಾ ಇಲಾಖೆಗಳು ಸಹಭಾಗಿತ್ವ ಜೊತೆಗೆ ಬ್ಯಾಂಕುಗಳು, ಸಾಹಿತಿಗಳು, ಕನ್ನಡಪರ ಸಂಘಟನೆಗಳು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹೆಚ್ಚಿನ ಒತ್ತು ನೀಡಲಾಗುವುದು.

ಕಾರ್ಯಕ್ರಮದ ಸುಗಮ ನಿರ್ವಹಣೆಗಾಗಿ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಪತಂಜಲಿ ಯೋಗ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಂಘ-ಸಂಸ್ಥೆಗಳ ಪದಾಧಿಕಾರಿಗಳಿಗೆ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳು, ಯೋಗಪಟುಗಳು ಮತ್ತು ವಿವಿಧ ಸಂಘಟನೆಗಳ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಆಹ್ವಾನ ನೀಡಲು ನಿರ್ಧರಿಸಲಾಯಿತು. ಈ ವರ್ಷವೂ ವಿಜೃಂಭಣೆಯಿಂದ ಅರ್ಥಪೂರ್ಣ ಕಾರ್ಯಕ್ರಮ ಆಚರಿಸಲು ಶಾಸಕರ ಸಹಕಾರ ತುಂಬಾ ಇದೆ ಇಂಥ ಶಾಸಕರು ನಮಗೆ ದೊರೆತಿರುವುದು ನಮ್ಮ ಪುಣ್ಯ ಎಂದು ಹೇಳಿ ಕಾರ್ಯಕ್ರಮದ ಸಂಪೂರ್ಣ ವಿವರಣೆಯನ್ನು ನೀಡಿದರು.

ರಾಜ್ಯ ಕಿಸಾನ್ ಸೇವಾ ಪ್ರಭಾರಿ ಸಂಜಯ ಕುಸ್ತಿಗಾರ, ನಾಗೇಂದ್ರ ಭಟ್, ಕಾರ್ಯಕ್ರಮದ ಕುರಿತ ವಿಚಾರಗಳನ್ನು ಹಂಚಿಕೊಂಡರು.

ಉದಯವಾಹಿನಿ ಚಿತ್ರ



''ಯೋಗವು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ ಮತ್ತು ಆರೋಗ್ಯಕರ ಜೀವನಶೈಲಿಗೆ ಯೋಗ ಅಗತ್ಯ ಅಥಣಿಯಲ್ಲಿ ಈ ಬಾರಿಯ ವಿಶ್ವ ಯೋಗ ದಿನವನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಅತ್ಯಂತ ಶಿಸ್ತುಬದ್ಧವಾಗಿ ಆಚರಿಸಬೇಕು'' ಎಂದು ಕರೆ ನೀಡಿದರು.
-ಅಥಣಿ ಶಾಸಕ ಲಕ್ಷ್ಮಣ ಸವದಿ

**ಸಮಿತಿಯು ಸಂಪೂರ್ಣ ಸಹಕಾರ**

**ಪತಂಜಲಿ ಯೋಗ ಸಮಿತಿಯ ತಾಲ್ಲೂಕು ಪ್ರಭಾರಿ ಎಸ್ ಕೆ ಹೊಳೆಪ್ಪನವರ ಹಾಗೂ ವಿವಿಧ ಪದಾಧಿಕಾರಿಗಳು ಮಾತನಾಡಿ, ಯೋಗ ದಿನಾಚರಣೆಯ ಅಂಗವಾಗಿ ತರಬೇತಿ ಶಿಬಿರಗಳನ್ನು ಆಯೋಜಿಸಲು ಸಿದ್ಧತೆ ನಡೆಸಿರುವುದಾಗಿ ತಿಳಿಸಿದರು. ಶಾಸಕರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಮಿತಿಯು ಸಂಪೂರ್ಣ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು.**

**ತಾಲ್ಲೂಕು ಪ್ರಭಾರಿ ಎಸ್.ಕೆ. ಹೊಳೆಪ್ಪನವರ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ ಕಳೆದ ಬಾರಿ ಮಾನ್ಯ ಶಾಸಕರಾದ ಲಕ್ಷ್ಮಣ ಸವದಿ ಅವರ ಸಂಪೂರ್ಣ ಸಹಕಾರದಿಂದ ಕಾರ್ಯಕ್ರಮ ತುಂಬಾ ಯಶಸ್ವಿಯಾಯಿತು ಅವರ ಸಹಕಾರವನ್ನು ಯೋಗ ಸಮಿತಿ ಎಂದಿಗೂ ಮರೆಯಲು ಸಾಧ್ಯವಿಲ್ಲ.**
-ಸುರೇಶ ಚಿಕ್ಕಟ್ಟಿ

# ರಕ್ತದಾನ ಇದು ಶ್ರೇಷ್ಠದಾನ: ದ್ಯಾಪೂರ



• ಉದಯವಾಹಿನಿ, ತಾಳಿಕೋಟೆ::

ರಕ್ತದಾನವೆಂಬುದು ಎಲ್ಲಾ ದಾನಗಳಲ್ಲಿ ಶ್ರೇಷ್ಠದಾನ ಇದಾಗಿದ್ದು ಒಬ್ಬ ವ್ಯಕ್ತಿಯೂ ರಕ್ತದಾನ ನೀಡುವಂತಹ ಒಂದು ಯುನಿಟ್ ರಕ್ತವು ಮೂರು ಜನರ ಪ್ರಾಣ ಉಳಿಸಬಲ್ಲದೆಂದು ಸ್ಥಳೀಯ ಸಮೂದಾಯ ಆರೋಗ್ಯ ಕೇಂದ್ರದ ಆಪ್ತ ಸಮಾಲೋಚಕರಾದ ಮಲ್ಲನಗೌಡ ದ್ಯಾಪೂರ ಅವರು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಜಯಪುರ, ಹಾಗೂ ಸಮೂದಾಯ ಆರೋಗ್ಯ ಕೇಂದ್ರ ತಾಳಿಕೋಟೆ ಹಾಗೂ ಶ್ರೀ ಸಿದ್ದಲಿಂಗ ದೇವರ ಪ್ರೀಮಿಯರ್ ಕ್ರಿಕೇಟ್ ಬಳಗ ಮತ್ತು ಸಿದ್ದಲಿಂಗ ದೇವರ ಅಭಿಮಾನಿ ಬಳಗದ ವತಿಯಿಂದ ಶ್ರೀ ಸಿದ್ದಲಿಂಗ ದೇವರ 25ನೇ ಜನ್ಮದಿನೋತ್ಸವ ಅಂಗವಾಗಿ ಶ್ರೀ ಖಾಸ್ಗತೇಶ್ವರ ಮಠದಲ್ಲಿ ಏರ್ಪಡಿಸಲಾದ ರಕ್ತದಾನ ಶಿಬಿರದಲ್ಲಿ ಮಾತನಾಡುತ್ತಿದ್ದ ಅವರು ರಕ್ತದಾನವೆಂಬುದು ಜೀವಗಳನ್ನು ಉಳಿಸುವ ಶ್ರೇಷ್ಠ ಕಾರ್ಯ .

ರಕ್ತದಾನ ಮಾಡುವ ಮುನ್ನ ದಾನಿಗಳ ಆರೋಗ್ಯವನ್ನು ನಮ್ಮ ಇಲಾಖೆ ತಪಾಸಣೆ ಮಾಡುತ್ತದೆ ಅವರು ಶ್ರೀ ಸಿದ್ದಲಿಂಗ ದೇವರ ಜನ್ಮದಿನೋತ್ಸವ ಅಂಗವಾಗಿ ಇಂದು ಏರ್ಪಡಿಸಲಾದಂತಹ ಈ ರಕ್ತದಾನ ಶಿಬಿರದಲ್ಲಿ 48 ಜನರು ರಕ್ತದಾನ ಮಾಡಿ ಪ್ರಶಸ್ತಿ ಪತ್ರವನ್ನು ಪಡೆದುಕೊಂಡಿದ್ದಾರೆ .

ರಕ್ತದಾನವೆಂಬುದನ್ನು ಮಾಡಿದರೆ ಆಪತ್ತುಕಾಲದಲ್ಲಿ ಅನ್ಯರಿಗೆ ಅನುಕೂಲವಾಗುತ್ತದೆ ಎಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡ ಶ್ರೀ ಸಿದ್ದಲಿಂಗ ದೇವರು ತಮ್ಮ ಜನ್ಮದಿನೋತ್ಸವದಲ್ಲಿ ಈ ಕಾರ್ಯಕ್ರಮವನ್ನು ಇಟ್ಟುಕೊಂಡು ಮಾದರಿಯ ಹಾಗೂ ಜನುಪಯೋಗಿಯಾಗುವಂತಹ ಕಾರ್ಯವನ್ನು ಮಾಡಿದ್ದಾರೆ ಈ ಕಾರ್ಯ ಕುರಿತು ಶ್ರೀ ಮಠದ ಉಸ್ತುವಾರಿಯಾದ ವೇ. ಮುರುಘೇಶ ವಿರಕ್ತಮಠ ಅವರು ಸಹಕಾರ ನೀಡಿರುವದು ಹೆಮ್ಮೆಯ ವಿಷಯವಾಗಿದೆ ಇಂತಹ ಕಾರ್ಯ ಪ್ರತಿವರ್ಷ ನಡೆಸುತ್ತಾ ಸಾಗಿರುವದು ಹೆಮ್ಮೆಯ ವಿಷಯವಾಗಿದೆ ಎಂದರು.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**

ರಕ್ತದಾನ ಶಿಬಿರದ ಮುಖ್ಯ ಕಾರ್ಯವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಡಾ.ಅರಸಿದ್ದ ಮುಂಡರಗಿ ಅವರು ನೆರವೇರಿಸಿದರಲ್ಲದೇ ಈ ಕಾರ್ಯಕ್ರಮವನ್ನು ಏರ್ಪಡಿಸಿದ ಶ್ರೀ ಸಿದ್ದಲಿಂಗ ದೇವರ ಅಭಿಮಾನಿ ಬಳಗಕ್ಕೆ ಅಭಿನಂದನಾ ಪತ್ರ ನೀಡಿ ಗೌರವಿಸಿದರು.

# ಸಚಿವ ಎಂ. ಬಿ. ಪಾಟೀಲ ಟೆಂಪಲ್ ರನ್

• ಉದಯವಾಹಿನಿ ವಿಜಯಪುರ, :

ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ. ಬಿ. ಪಾಟೀಲ ಅವರು ನಾನಾ ಧಾರ್ಮಿಕ ಸ್ಥಳಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ನೂತನ ಸಂಪುಟದಲ್ಲಿ ಸಚಿವರಾದ ನಂತರ ಇದೇ ಮೊದಲ ಬಾರಿಗೆ ತವರು ಜಿಲ್ಲೆ ವಿಜಯಪುರಕ್ಕೆ ಆಗಮಿಸಿದ ಅವರು, ತಿಕೋಟಾ ತಾಲ್ಲೂಕಿನ ಮುಮ್ಮೆಟ್ಟಿಗುಡ್ಡದಲ್ಲಿರುವ ಶ್ರೀ ಅಮೋಘಸಿದ್ಧೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಅಮೋಘಸಿದ್ಧೇಶ್ವರ ದೇವಸ್ಥಾನ ತನ್ನ ಐತಿಹಾಸಿಕ ಹಿನ್ನೆಲೆ ಹಾಗೂ ಧಾರ್ಮಿಕ ಮಹತ್ವಕ್ಕಾಗಿ ಪ್ರಸಿದ್ಧಿ ಪಡೆದಿದ್ದು, ಅಮೋಘಸಿದ್ಧೇಶ್ವರ ದೇವರ ದರ್ಶನ ಪಡೆದು ಧನ್ಯನಾಗಿದ್ದೇನೆ. ದೇವರು ನಾಡಿನ ಸಮಸ್ತ ಜನತೆಯ ಸುಖ, ಶಾಂತಿ, ಸಮೃದ್ಧಿ ಮತ್ತು ಒಳಿತನ್ನು ಮಾಡಲಿ ಎಂದು ಪ್ರಾರ್ಥಿಸಿರುವುದಾಗಿ ತಿಳಿಸಿದರು. ನಂತರ ತಮ್ಮ ಜನ್ಮಸ್ಥಳ ತೊರವಿ ಗ್ರಾಮಕ್ಕೆ ಆಗಮಿಸಿದ ಸಚಿವರು, ಪುರಾಣ ಮತ್ತು ಐತಿಹಾಸಿಕ ಮಹತ್ವ ಹೊಂದಿರುವ ಶ್ರೀ ಲಕ್ಷ್ಮೀದೇವಿ ಹಾಗೂ ಶ್ರೀ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ನಾಡಿನ ಸಮಸ್ತ ಜನತೆಯ ಸುಖ, ಶಾಂತಿ, ಸಮೃದ್ಧಿ ಮತ್ತು ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಮತ್ತು ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರು ಸಚಿವರನ್ನು ಅಭಿನಂದಿಸಿದರು. ಬಳಿಕ ತಿಕೋಟಾದ ಹಜರತ್ ಹಾಜಿ ಮಸ್ತಾನ ಮತ್ತು ಬಡಕಲಸಾಬ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡ ಸಚಿವರು, ತಾಜಪುರ ಎಚ್. ಗ್ರಾಮದ ಹಜರತ್ ಹಾಜಿ ಮಸ್ತಾನ ಜಾತ್ರಾ ಮಹೋತ್ಸವದಲ್ಲಿಯೂ ಭಾಗಿಯಾದರು.

ಉದಯವಾಹಿನಿ ಚಿತ್ರ




**ಸೌಹಾರ್ದತೆ ಹಾಗೂ ಭಾವೈಕ್ಯತೆಗೆ ಹೆಸರಾಗಿರುವ ಇಂತಹ ಜಾತ್ರಾ ಮಹೋತ್ಸವಗಳು ವಿವಿಧ ಧರ್ಮ, ಜಾತಿ ಮತ್ತು ಸಮುದಾಯಗಳ ಜನರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸುವ ಮೂಲಕ ಸಾಮಾಜಿಕ ಸಾಮರಸ್ಯವನ್ನು ಮತ್ತಷ್ಟು ಬಲಪಡಿಸುತ್ತವೆ. ನಮ್ಮ ನಾಡಿನ ಸರ್ವಧರ್ಮ ಸಮಭಾವ ಮತ್ತು ಸಹಬಾಳ್ವೆಯ ಪರಂಪರೆಯನ್ನು ಇವುಗಳು ಇನ್ನಷ್ಟು ಶ್ರೀಮಂತಗೊಳಿಸುತ್ತವೆ ಎಂದು ಹೇಳಿದರು.**
-ಸಚಿವ ಎಂ. ಬಿ. ಪಾಟೀಲ

# ಹಿಂದೂ ಧರ್ಮದ ಪ್ರತಿಯೊಂದು ಆಚರಣೆಯಲ್ಲೂ ವೈಜ್ಞಾನಿಕ ಹಿನ್ನೆಲೆಯಿದೆ

• ಉದಯವಾಹಿನಿ, ಮುದ್ದೇಬಿಹಾಳ:

ಹಿಂದೂ ಧರ್ಮದ ಪ್ರತಿಯೊಂದು ಆಚರಣೆಗಳು ಮತ್ತು ಸಂಪ್ರದಾಯಗಳು ಕೇವಲ ನಂಬಿಕೆಯಲ್ಲ, ಅವುಗಳ ಹಿಂದೆ ಆಳವಾದ ವೈಜ್ಞಾನಿಕ ಹಿನ್ನೆಲೆ ಹಾಗೂ ಐತಿಹ್ಯಗಳಿವೆ. ನಮ್ಮ ಪೂರ್ವಜರು ನಮಗಾಗಿ ಕೊಟ್ಟು ಹೋಗಿರುವ ಇಂತಹ ಶ್ರೇಷ್ಠ ಆಚರಣೆಗಳನ್ನು ನಾವು ಎಂದಿಗೂ ಕೈಬಿಡಬಾರದು ಎಂದು ಬಳ್ಳಾರಿಯ ವಿದ್ವಾಂಸರಾದ ಮುಕುಂದ ಆಚಾರ್ಯ ಹಾಗೂ ಮೈಸೂರಿನ ದಯಾನಂದ ಶರ್ಮಾ ಅವರು ಕರೆ ನೀಡಿದರು. ಇಲ್ಲಿನ ಮಾರುತಿ ನಗರದ ಶ್ರೀ ಮೌನೇಶ್ವರ ದೇವಾಲಯದ ಶ್ರೀ ಕಾಳಿಕಾದೇವಿ ಮಂಗಳ ಕಾರ್ಯಾಲಯದಲ್ಲಿ ಅಧಿಕ ಮಾಸದ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ವಿಶೇಷ ಪೂಜೆ, ಹೋಮ-ಹವನ ಹಾಗೂ ಮಂಗಳ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಆಶೀರ್ವಚನ ನೀಡಿದರು. ಅಧಿಕ ಮಾಸದ ದಾನಕ್ಕೆ ವಿಶೇಷ ಫಲ ಕಾರ್ಯಕ್ರಮದಲ್ಲಿ ಅಧಿಕ ಮಾಸದ ಮಹತ್ವವನ್ನು ವಿವರಿಸಿದ ಅವರು, ಅಧಿಕ ಮಾಸವು ಆಧ್ಯಾತ್ಮಿಕ ಸಾಧನೆಗೆ ಅತ್ಯಂತ ಶ್ರೇಷ್ಠವಾದ ಸಮಯ. ಈ ಮಾಸದಲ್ಲಿ ದೇವತೆಗಳನ್ನು ಪ್ರಸನ್ನಗೊಳಿಸಲು ವಿಶೇಷ ದೀಪಾರಾಧನೆ ಮಾಡಬೇಕು.

ಉದಯವಾಹಿನಿ ಚಿತ್ರ



ಈ ಪವಿತ್ರ ಕಾಲದಲ್ಲಿ ಮಾಡುವ ದಾನ-ಧರ್ಮಗಳಿಂದ ಅಕ್ಷಯ ಫಲ ಲಭಿಸುತ್ತದೆ. ದೇವತಾ ಅನುಗ್ರಹದೊಂದಿಗೆ ಸಕಾರಾತ್ಮಕ ಶಕ್ತಿ ವೃದ್ಧಿಯಾಗುತ್ತದೆ ಎಂದರು.

ಇದೇ ವೇಳೆ, ಉಪನಯನ ಸಂಸ್ಕಾರ ಹೊಂದಿದ ಪ್ರತಿಯೊಬ್ಬರೂ ತಮ್ಮ ನಿತ್ಯಕರ್ಮವಾದ ಸಂಧ್ಯಾ ವಂದನೆಯನ್ನು ತಪ್ಪದೇ ಮಾಡಬೇಕು. ಇದು ಮಾನಸಿಕ ನೆಮ್ಮದಿ ಹಾಗೂ ಆಧ್ಯಾತ್ಮಿಕ ಉನ್ನತಿಗೆ ಪೂರಕ ಎಂದು ನೆನಪಿಸಿದರು. ವಿಶ್ವಕರ್ಮ ಸಮಾಜದ ಪ್ರಮುಖರಾದ ಮಳೆಯಪ್ಪ ಪತ್ತಾರ ಕಾಳಗಿ ಅವರು ಈ ಬಾರಿಯ ಅಧಿಕ ಮಾಸದ ವಿಶೇಷ ಪೂಜೆ, ಹೋಮ-ಹವನ, ಮಹಾ ಪ್ರಸಾದ ಹಾಗೂ ವಸ್ತ್ರದಾನ ಸೇರಿದಂತೆ ಸಂಪೂರ್ಣ ಕಾರ್ಯಕ್ರಮದ ಜವಾಬ್ದಾರಿಯನ್ನು ಹೊತ್ತುಕೊಂಡು, ಅತ್ಯಂತ ಅಚ್ಚುಕಟ್ಟಾಗಿ ಮತ್ತು ವೈಭವಯುತವಾಗಿ ನಡೆಸಿಕೊಟ್ಟರು.

ಈ ಧಾರ್ಮಿಕ ವಿಧಿವಿಧಾನಗಳಲ್ಲಿ ಒಟ್ಟು 50 ದಂಪತಿಗಳು ಶ್ರದ್ಧಾ-ಭಕ್ತಿಯಿಂದ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಶಹಾಪೂರದ ಅಜ್ಜಯ್ಯಾ ಸ್ವಾಮಿಗಳು ದಿವ್ಯ ಸನ್ನಿಧಾನ ವಹಿಸಿದ್ದರು. ಪ್ರಮುಖರಾದ ವಿಜಯ ಬಡಿಗೇರ, ಸಹನಾ ಬಡಿಗೇರ, ಈರಣ್ಣ-ಗೀತಾ ದಂಪತಿಗಳು, ವಿಶಾಲ, ಕಾಂತು, ಸುಭಾಸ ದಂಪತಿಗಳು, ಮೌನೇಶ ಪತ್ತಾರ ಹಡಲಗೇರಿ, ಶ್ರೀಶೈಲ ಬಡಿಗೇರ, ಕಾಶಿನಾಥ, ಈರಣ್ಣ ಕೂಡಿಹಾಳ, ಶಿರವಾಳ ದಂಪತಿಗಳು ಸೇರಿದಂತೆ ಮುದ್ದೇಬಿಹಾಳ ಹಾಗೂ ಸುತ್ತಮುತ್ತಲಿನ ವಿಶ್ವಕರ್ಮ ಸಮಾಜದ ನೂರಾರು ಬಾಂಧವರು, ಮಹಿಳೆಯರು ಮತ್ತು ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಪ್ರಸಾದ ವಿನಿಯೋಗದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

# ಆರಂಭಿಕ ಪತ್ತೆ ಮತ್ತು ನಿಖರ ಚಿಕಿತ್ಸೆಯಿಂದ ಬ್ರೇನ್ ಟ್ಯುಮರ್ ನಿವಾರಣೆ ಸಾಧ್ಯ: ಡಾ.ಭರತಕುಮಾರ

• ಉದಯವಾಹಿನಿ, ಬೀದರ್

ಉದಯವಾಹಿನಿ ಚಿತ್ರ



ಆರಂಭಿಕ ರೋಗದ ಪತ್ತೆ ಹಾಗೂ ಅದಕ್ಕೆ ತುರ್ತು ಚಿಕಿತ್ಸೆ ನೀಡುವುದರಿಂದ ಮೆದುಳಿನ ಗಡ್ಡೆ ನಿವಾರಣೆ ಮಾಡುವ ಮುಖೇನ ರೋಗಿಯ ಜೀವ ಉಳಿಸ ಬಹುದಾಗಿದೆ ಎಂದು ಹೈದ್ರಾಬಾದ್ ಹೈಟೆಕ್ ಸೀಟಿ ಏರಿಯಾದ ಯಶೋದಾ ಆಸ್ಪತ್ರೆಯ ಕ್ಯಾನ್ಸರ್ ರೋಗ ತಜ್ಞರಾದ ಡಾ.ಭರತಕುಮಾರ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ಇಡೀ ವಿಶ್ವಾದ್ಯಂತ ಆಚರಿಸಲಾದ ವಿಶ್ವ ಮೆದುಳು ಗಡ್ಡೆ ದಿನಾಚರಣೆ ಪ್ರಯುಕ್ತ ಮೆದುಳಿನ ಗಡ್ಡೆಯ ಲಕ್ಷಣಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಮೆದುಳಿನ ಗಡ್ಡೆಗಳು ಯಾವುದೇ ವಯಸ್ಸಿನವರಲ್ಲಿ ಕಾಣಿಸಬಹುದಾಗಿದ್ದು, ಆರಂಭಿಕ ಹಂತದಲ್ಲೇ ರೋಗವನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡುವುದರಿಂದ ಚಿಕಿತ್ಸೆಯ ಯಶಸ್ಸು ಹಾಗೂ ಜೀವನದ ಗುಣಮಟ್ಟವನ್ನು ಗಮನಾರ್ಹವಾಗಿ ಹೆಚ್ಚಿಸಬಹುದು ಎಂದು ತಿಳಿಸಿದರು.

# ಪ್ರಶ್ನೆ ಕೇಳಿದ ರೈತನನ್ನು ತಳ್ಳಿದ ಶಾಸಕ ತಂಗಡಗಿ: ತಪ್ಪು ತಿದ್ದಿಕೊಳ್ಳಿ ಎಂದು ರೈತ ಸಂಘದ ಎಚ್ಚರಿಕೆ

• ಉದಯವಾಹಿನಿ, ಕಾರಟಗಿ

ರೈತ ಸಂಪರ್ಕ ಕೇಂದ್ರದ ನೂತನ ಕಟ್ಟಡ ಭೂಮಿ ಪೂಜೆ ವೇಳೆ ಪ್ರಶ್ನೆ ಮಾಡಿದ ರೈತನನ್ನು ಕನಕಗಿರಿ ಶಾಸಕ ಶಿವರಾಜ್ ಎಸ್. ತಂಗಡಗಿ ಅವರು ತಳ್ಳಿರುವ ಘಟನೆಗೆ ರೈತ ಸಂಘ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಶಾಸಕರು ತಮ್ಮ ತಪ್ಪನ್ನು ತಿದ್ದಿಕೊಳ್ಳಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತಕ್ಕ ಉತ್ತರ ನೀಡುವುದಾಗಿ ರೈತ ಮುಖಂಡರು ಎಚ್ಚರಿಕೆ ನೀಡಿದ್ದಾರೆ. ಮಂಗಳವಾರ ಕಾರಟಗಿ ಎಪಿಎಂಸಿಯಲ್ಲಿರುವ ರೈತರ ಸಮುದಾಯ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ರೈತ ಮುಖಂಡರು ಶಾಸಕರ ನಡೆಯನ್ನು ಖಂಡಿಸಿದರು.

**ಘಟನೆಯ ವಿವರ:** ರೈತ ಮುಖಂಡ ಹನುಮಂತಪ್ಪ ಉಳೆನೂರು ಅವರು ಮಾತನಾಡಿ, ''ಕನಕಗಿರಿ ಶಾಸಕರು ಪಟ್ಟಣದಲ್ಲಿ ವಿವಿಧ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ರೈತ ಸಂಪರ್ಕ ಕೇಂದ್ರದ ಭೂಮಿ ಪೂಜೆಗೆ ಬಂದಾಗ ರೈತ ನಾರಾಯಣಪ್ಪ ಈಡಿಗೇರ ಅವರು ಶಾಸಕರ ಎದುರೇ ಅಧಿಕಾರಿಗಳಿಗೆ ಧಿಕ್ಕಾರ ಕೂಗಿದರು'' ಎಂದರು.

''ರೈತ ಸಂಪರ್ಕ ಕೇಂದ್ರ ರೈತರಿಗಾಗಿಯೇ ರಾಜ್ಯ ಸರ್ಕಾರ ಸ್ಥಾಪಿಸಿದೆ. ಆದರೆ ನೂತನ ಕಟ್ಟಡದ ಭೂಮಿ ಪೂಜೆಗೆ ರೈತರಿಗೆ ಆಹ್ವಾನ ನೀಡಿಲ್ಲ. ಅಧಿಕಾರಿಗಳಿಗೆ ಕರೆ ಮಾಡಿದರೆ ಕರೆ ಸ್ವೀಕರಿಸುತ್ತಿಲ್ಲ. ಕೃಷಿ ಅಧಿಕಾರಿಗಳು ರೈತರಿಗೆ ಮಾಹಿತಿ ನೀಡುತ್ತಿಲ್ಲ'' ಎಂದು ರೈತ ನಾರಾಯಣಪ್ಪ ಆಕ್ರೋಶ ವ್ಯಕ್ತಪಡಿಸಿದ್ದರು.





ಉದಯವಾಹಿನಿ ಚಿತ್ರ

**ರೈತರ ಆರೋಪ:** ಈ ಸಂದರ್ಭದಲ್ಲಿ ಶಾಸಕ ಶಿವರಾಜ್ ತಂಗಡಗಿ ಅವರು ಸಹನೆ ಕಳೆದುಕೊಂಡು ರೈತನನ್ನು ಕೈಯಿಂದ ಪಕ್ಕಕ್ಕೆ ತಳ್ಳಿ ಭೂಮಿ ಪೂಜೆ ಕಾರ್ಯಕ್ರಮಕ್ಕೆ ಮುಂದಾದರು. ತಕ್ಷಣ ಪೊಲೀಸರು ರೈತನನ್ನು ಸ್ಥಳದಿಂದ ಬೇರೆ ಕಡೆ ಕರೆದುಕೊಂಡು ಹೋದರು. ''ಬಿಡಿ ಸಾರ್'' ಎಂದು ಕೇಳಿಕೊಂಡರೂ ಪೊಲೀಸರು ಬಿಡಲಿಲ್ಲ.

''ಶಾಸಕರು ಸ್ಥಳದಲ್ಲಿದ್ದ ಕೃಷಿ ಅಧಿಕಾರಿಗಳನ್ನು ಕರೆದು ಉತ್ತರ ಕೊಡಿಸಬಹುದಿತ್ತು. ಆದರೆ 'ನೀನ್ಯಾರೂ ಕೇಳೋಕೆ, ರೈತರನ್ನು ಆಹ್ವಾನ ಮಾಡಬೇಕು ಎಂಬ ನಿಯಮ ಇಲ್ಲ' ಎಂದು ತಳ್ಳಿದ್ದಾರೆ. ರೈತನನ್ನು ಅಪರಾಧಿಯಂತೆ ಎಳೆದುಕೊಂಡು ಹೋಗಿರುವುದು ಖಂಡನೀಯ'' ಎಂದು ಹನುಮಂತಪ್ಪ ಉಳೆನೂರು ಆಕ್ರೋಶ ವ್ಯಕ್ತಪಡಿಸಿದರು. ''ಈ ಘಟನೆಯಿಂದ ರೈತರ ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕಲಾಗಿದೆ. ರೈತರು ಪ್ರಶ್ನೆ ಮಾಡುವುದನ್ನೇ ಸಹಿಸದ ಸ್ಥಿತಿ ನಿರ್ಮಾಣವಾಗಿದೆ'' ಎಂದು ರೈತ ಸಂಘ ದೂರಿದೆ.

- ಸ್ಥಳ: ಕಾರಟಗಿ ಎಪಿಎಂಸಿ ರೈತರ ಸಮುದಾಯ ಭವನ.
- ಆರೋಪ: ಭೂಮಿ ಪೂಜೆ ವೇಳೆ ಪ್ರಶ್ನಿಸಿದ ರೈತನನ್ನು ಶಾಸಕರು ತಳ್ಳಿದರು.
- ರೈತನ ಹೆಸರು: ನಾರಾಯಣಪ್ಪ ಈಡಿಗೇರ.
- ರೈತರ ಆಗ್ರಹ: ಶಾಸಕರು ತಪ್ಪು ತಿದ್ದಿಕೊಳ್ಳಬೇಕು.

**ರೈತರ ಆಗ್ರಹ:** ಶಾಸಕರು ತಮ್ಮ ನಡವಳಿಕೆಯನ್ನು ತಿದ್ದಿಕೊಳ್ಳಬೇಕು. ರೈತರನ್ನು ಗೌರವದಿಂದ ಕಾಣಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರೈತ ಸಮುದಾಯದಿಂದ ತಕ್ಕ ಉತ್ತರ ಸಿಗಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಲಾಯಿತು.

# 'ಸರ್ಕಾರದ ಯೋಜನೆ ಫಲಾನುಭವಿಗಳಿಗೆ ತಲುಪಿಸಿ'

## ನಗರದ ಜಿಲ್ಲಾಡಳಿತ ಕಚೇರಿಯ ಸಭಾಂಗಣದಲ್ಲಿ ಮಹತ್ವಕಾಂಕ್ಷಿ ಜಿಲ್ಲೆ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ

1 : ಜನರ ಆರೋಗ್ಯ ಮತ್ತು ಪೌಷ್ಟಿಕ ಕೃಷಿ
2 : ವಿವಿಧ ಸರ್ಕಾರದ ಸಾಲ ಸೌಲಭ್ಯಗಳು
3 : ಸಾಂಸ್ಥಿಕ ವಿತರಣೆ ಮತ್ತು ಪೌಷ್ಟಿಕಾಂಶ

• ಉದಯವಾಹಿನಿ, ರಾಯಚೂರು:

'ದೇಶದಲ್ಲಿನ ಮಹತ್ವಾಕಾಂಕ್ಷಿ ಜಿಲ್ಲೆಗಳು ಮತ್ತು ಬ್ಲಾಕ್‌ಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡಿ, ಹಿಂದುಳಿದ ಹಣೆಪಟ್ಟಿ ಕಳಚುವುದು ಮಹತ್ವಾಕಾಂಕ್ಷಿ ಜಿಲ್ಲೆ ಯೋಜನೆಯ ಉದ್ದೇಶವಾಗಿದೆ. ಸರ್ಕಾರದ ವಿವಿಧ ಯೋಜನೆಗಳನ್ನು ಅರ್ಹ ಫಲಾನುವಿಗಳಿಗೆ ತಲುಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಕೇಂದ್ರ ವಾಣಿಜ್ಯ ಇಲಾಖೆಯ ಜಂಟಿ ಕಾರ್ಯದರ್ಶಿ ಹಾಗೂ ಮಹತ್ವಾಕಾಂಕ್ಷಿ ಜಿಲ್ಲೆಯ ರಾಯಚೂರಿನ ಕೇಂದ್ರ ಪ್ರಭಾರ ಅಧಿಕಾರಿ ಉಜ್ವಲಕುಮಾರ ಘೋಷ್ ಹೇಳಿದರು. ನಗರದ ಜಿಲ್ಲಾಡಳಿತ ಕಚೇರಿಯ ಸಭಾಂಗಣದಲ್ಲಿ ಮಹತ್ವಾಕಾಂಕ್ಷಿ ಜಿಲ್ಲೆ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, 'ರಾಜ್ಯದ ಮಹತ್ವಾಕಾಂಕ್ಷೆ ಜಿಲ್ಲೆಯೆಂದು ಗುರುತಿಸಿಕೊಂಡಿರುವ ರಾಯಚೂರಿನ ಸಮಗ್ರ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುವ ಮೂಲಕ ನಿರೀಕ್ಷಿತ ಗುರಿ ತಲುಪುವ ಪ್ರಯತ್ನ ನಡೆಸಿದೆ. ಅಧಿಕಾರಿಗಳು ಈ ದಿಸೆಯಲ್ಲಿ ಹೆಚ್ಚು ಕಾರ್ಯಪ್ರವೃತ್ತರಾಗುವ ಅಗತ್ಯವಿದೆ' ಎಂದು ತಿಳಿಸಿದರು.

ಕೃಷಿ ಮತ್ತು ಜಲ ಸಂಪನ್ಮೂಲ, ಶಿಕ್ಷಣ, ಆರ್ಥಿಕ ಸೇರ್ಪಡೆ

ಉದಯವಾಹಿನಿ ಚಿತ್ರ



'ಕೃಷಿ, ಶಿಕ್ಷಣ, ಆರೋಗ್ಯ, ನೀರಾವರಿ, ಮೂಲಸೌಕರ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕೌಶಲ ಕ್ಷೇತ್ರದಲ್ಲಿ ತೀರಾ ಹಿಂದುಳಿದ ದೇಶದ 112 ಮಹತ್ವಾಕಾಂಕ್ಷಿ ಜಿಲ್ಲೆ ಮತ್ತು 500 ತಾಲ್ಲೂಕುಗಳನ್ನು ಬ್ಲಾಕ್ ಎಂದು ವಿಂಗಡಿಸಿ, ಸುಸ್ಥಿರ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ' ಎಂದು ಹೇಳಿದರು.

'ವಿವಿಧ ಸರ್ಕಾರದ ಸಾಲ ಸೌಲಭ್ಯಗಳು, ಯೋಜನೆಗಳು, ಪಿಂಚಣಿಗಳು ಸರಿಯಾಗಿ ಅನುಷ್ಠಾನ ಮಾಡಬೇಕು. ಜಿಲ್ಲೆಯಲ್ಲಿ ಆಧಾರ್ ಜೋಡಣೆ ಶೇ 100ರಷ್ಟು ಮಾಡಬೇಕು. ನೀತಿ ಆಯೋಗದ ಎಲ್ಲಾ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಅನುಷ್ಠಾನಗೊಳಿಸಬೇಕು.

**ಯುಪಿಎಚ್‌ಸಿ ಕೇಂದ್ರಗಳ ಜೊತೆಗೆ ಕೃಷಿ ವಿಶ್ವವಿದ್ಯಾಲಯ,**

**ಜಿಲ್ಲೆಯಲ್ಲಿ 19,28,812 ಜನಸಂಖ್ಯೆ ಹೊಂದಿದೆ. 884 ಕಂದಾಯ ಹಾಗೂ 179 ಗ್ರಾಮ ಪಂಚಾಯಿತಿಗಳು, 1,658 ಶಾಲೆಗಳು, ಒಂದು ಸರ್ಕಾರಿ ಮೆಡಿಕಲ್ ಸಂಸ್ಥೆ, 4 ತಾಲ್ಲೂಕು ಜನರಲ್ ಆಸ್ಪತ್ರೆ, 6 ಸಮುದಾಯ ಆರೋಗ್ಯ ಕೇಂದ್ರಗಳು, 50 ಪ್ರಾಥಮಿಕ ಆರೋಗ್ಯ ಕೇಂದ್ರ, 6 ಯುಪಿಎಚ್‌ಸಿ ಕೇಂದ್ರಗಳ ಜೊತೆಗೆ ಕೃಷಿ ವಿಶ್ವವಿದ್ಯಾಲಯ, ರಾಯಚೂರು ವಿಶ್ವವಿದ್ಯಾಲಯದ ಹಾಗೂ ಐಐಐಟಿ ರಾಯಚೂರಿನಲ್ಲಿ ಕಾರ್ಯ ನಿರ್ವಹಿಸುತ್ತವೆ ಎಂದು ಸಭೆಗೆ ಮಾಹಿತಿ ನೀಡಿದರು.**

ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು' ಎಂದು ಸೂಚನೆ ನೀಡಿದರು. ಜಿಲ್ಲಾಧಿಕಾರಿ ಪೂವಿತಾ ಎಸ್. ಮಾತನಾಡಿ, 'ಪ್ರಧಾನಮಂತ್ರಿಗಳ ವಿಶೇಷ ಕಾರ್ಯಕ್ರಮಗಳಲ್ಲಿ ಒಂದಾದ ಮಹತ್ವಾಕಾಂಕ್ಷೆ ಜಿಲ್ಲೆ ಯೋಜನೆಯಡಿ ಜಿಲ್ಲೆಯಲ್ಲಿ ವಿವಿಧ ಪ್ರಗತಿ ನಡೆದಿದ್ದು, ಸೂಚ್ಯಂಕಗಳಲ್ಲಿ ರಾಯಚೂರು ಜಿಲ್ಲೆ ಉತ್ತಮ ಸ್ಥಾನ ಪಡೆದಿದೆ. ಜನರ ಆರೋಗ್ಯ ಮತ್ತು ಪೌಷ್ಟಿಕ, ಕೃಷಿ ಮತ್ತು ಜಲ ಸಂಪನ್ಮೂಲ, ಶಿಕ್ಷಣ, ಆರ್ಥಿಕ ಸೇರ್ಪಡೆ ಹಾಗೂ ಕೌಶಲಾಭಿವೃದ್ಧಿ ಮತ್ತು ಮೂಲಸೌಕರ್ಯಗಳಿಗೆ 49 ಸೂಚ್ಯಂಕ ನೀಡಲಾಗಿದ್ದು, ಅವುಗಳನ್ನು ಸರಿಯಾಗಿ ಅನುಷ್ಠಾನ ಮಾಡಬೇಕು' ಎಂದು ಹೇಳಿದರು. ಜಿ.ಪಂ ಸಿಇಒ ಈಶ್ವರಕುಮಾರ ಕಾಂದೂ ಮಾತನಾಡಿ, 'ತಾಯಂದಿರು, ಮಕ್ಕಳು ಮತ್ತು ಹದಿಹರೆಯದವರ ಆರೋಗ್ಯ ವೃದ್ಧಿಗೆ ದತ್ತಾಂಶ ಆಧಾರಿತ ಮಧ್ಯಸ್ಥಿಕೆಗಳ ಮೂಲಕ 250 ದುರ್ಬಲ ಹಳ್ಳಿಗಳನ್ನು ಗುರಿಯಾಗಿಟ್ಟುಕೊಂಡು ಸಮಗ್ರ ಪೋಷಣೆ ಮತ್ತು ಆರೋಗ್ಯ ಉಪಕ್ರಮ ಹಾಗೂ ಸಂಪೂರ್ಣತಾ ಅಭಿಯಾನಡಿ ರೋಗನಿರೋಧಕ ಶಕ್ತಿ, ಎ ಎನ್.ಸಿ, ಸಾಂಸ್ಥಿಕ ವಿತರಣೆ ಮತ್ತು ಪೌಷ್ಟಿಕಾಂಶ ಸೇವೆಗಳ ಶುದ್ಧತ್ವ, ಲ್ಯಾಬ್ ಮತ್ತು ಅನುಸರಣೆಗಳ ಮೇಲ್ವಿಚಾರಣೆ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ ಹಾಗೂ ಕೃಷಿ ಇಲಾಖೆ ಜಂಟಿ ನಿರ್ದೇಶಕ ಪ್ರಕಾಶ್ ಚೌವ್ಹಾಣ್ ತಮ್ಮ ಇಲಾಖೆಗಳ ಪ್ರಗತಿ ವಿವರಿಸಿದರು.

**'ಎಚ್.ಆರ್.ಪಿ ಟ್ರ್ಯಾಕಿಂಗ್ ಮತ್ತು ರಾಯಚೂರು, ಮಾನ್ವಿ, ಸಿಂಧನೂರು ಮತ್ತು ಲಿಂಗಸುಗೂರುಗಳಲ್ಲಿ ಸ್ಥಾಪಿಸಲಾದ ಎಂ.ಸಿ.ಎಚ್ ಆಸ್ಪತ್ರೆಗಳಲ್ಲಿ 7,020 ಹೆರಿಗೆ ಮಾಡಿಸಲಾಗಿದೆ. ಅಂಗನವಾಡಿ ಕೇಂದ್ರಗಳ ಮೂಲಕ ಬೆಳವಣಿಗೆಯ ಮೇಲ್ವಿಚಾರಣೆ ಮತ್ತು ಪೌಷ್ಟಿಕಾಂಶ ಸಮಾಲೋಚನೆ ಕಾಲಕಾಲಕ್ಕೆ ಮಾಡಲಾಗುತ್ತಿದೆ' ಎಂದು ಹೇಳಿದರು.**
-ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹಾಪಾತ್ರ

# ಮಿನಿ ನ್ಯೂಸ್

## ಬ್ರಾಹ್ಮಣ ವಧು-ವರ ಅನ್ವೇಷಣಾ ಸಮಾವೇಶಕ್ಕೆ ಬ್ಯಾನರ್ ಅನಾವರಣ

• ಉದಯವಾಹಿನಿ, ವಿಜಯಪುರ

ಸಮಸ್ತ ಬ್ರಾಹ್ಮಣ ಸಂಘಟನೆಗಳು ತಾಲೂಕು ಹಾಗೂ ಜಿಲ್ಲಾ ಘಟಕಗಳ ಸಹಕಾರದೊಂದಿಗೆ, ಶ್ರೀ ಚಿದಂಬರ ಸೇವಾ ಸಮಿತಿ ಮತ್ತು ಮಂಗಳಸೂತ್ರ ಫೌಂಡೇಶನ್ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಶ್ರೀ ಚಿದಂಬರೇಶ್ವರ ಸಾಂಸ್ಕೃತಿಕ ಭವನ, ರಿಂಗ್ ರೋಡ್, ಮನಗೂಳಿ ರಸ್ತೆಯಲ್ಲಿ ನಡೆಯಲಿರುವ 68ನೇ ರಾಜ್ಯ ಮಟ್ಟದ ತ್ರಿಮತಸ್ಥ ಬ್ರಾಹ್ಮಣ ವಧು-ವರ ಅನ್ವೇಷಣಾ ಸಮಾವೇಶದ ಬ್ಯಾನರ್ ಅನ್ನು ಅನಾವರಣಗೊಳಿಸಲಾಯಿತು. ಈ ಸಮಾವೇಶವು ಜು. 11 ಮತ್ತು 12 ರಂದು ಎರಡು ದಿನಗಳ ಕಾಲ ನಡೆಯಲಿದೆ. ಜೊತೆಗೆ, ಕಲ್ಯಾಣ ಪ್ರಾಪ್ತಿಗಾಗಿ ಶ್ರೀ ಗಿರಿಜಾ ಕಲ್ಯಾಣೋತ್ಸವ ಮಹಾಸಂಕಲ್ಪ ಕಾರ್ಯಕ್ರಮವನ್ನು ಸಹ ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಶ್ರೀ ಚಿದಂಬರ ದತ್ತಾತ್ರೇಯ ಜೋಶಿ ಹಾಗೂ ಸಂಚಾಲಕ ಶ್ರೀನಿವಾಸ ಭಾರದ್ವಾಜ್ (ಮೈಸೂರು) ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

## ಜೂ.10ರಿಂದ ದ.ಕ.ಜಿಲ್ಲೆಯಲ್ಲಿ ಭಾರಿ ಮಳೆಯ ಮುನ್ಸೂಚನೆ

• ಉದಯವಾಹಿನಿ, ಮಂಗಳೂರು :

ಮಂಗಳೂರು ನಗರ ಸಹಿತ ದ.ಕ. ಜಿಲ್ಲೆಯಲ್ಲಿ ಬೆಳಗ್ಗಿನಿಂದಲೇ ಮೋಡಕವಿದ ವಾತಾವರಣವಿತ್ತು. ಅಲ್ಲದೆ ಹವಾಮಾನದಲ್ಲಿ ಏರುಪೇರು ಕಂಡುಬಂದಿದ್ದು, ಹಲವೆಡೆ ಬಿಟ್ಟು ಬಿಟ್ಟು ಮಳೆಯಾಗಿದೆ. ಸಂಜೆ ವೇಳೆಗೆ ಬೆಳ್ತಂಗಡಿ, ಸುಳ್ಯ ಮತ್ತು ಪುತ್ತೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದೆ. ಮಂಗಳೂರು, ಉಳ್ಳಾಲ, ಬಂಟ್ವಾಳ, ಮುಲ್ಕಿ ತಾಲ್ಲೂಕಿನ ಕೆಲವೆಡೆ ಸಾಧಾರಣ ಮಳೆಯಾದ ಬಗ್ಗೆ ವರದಿಯಾಗಿದೆ.

ರವಿವಾರ ಬೆಳಗ್ಗಿನಿಂದ ಸೋಮವಾರ ಬೆಳಗ್ಗಿನವರೆಗೆ ಜಿಲ್ಲೆಯಲ್ಲಿ ಸರಾಸರಿ 10.5 ಮಿಮೀ ಮಳೆ ದಾಖಲಾಗಿದೆ.

ಬೆಳ್ತಂಗಡಿಯಲ್ಲಿ 9.4 ಮಿಮೀ, ಬಂಟ್ವಾಳದಲ್ಲಿ 7.8 ಮಿಮೀ, ಮಂಗಳೂರು 4.3 ಮಿಮೀ, ಪುತ್ತೂರು 11.3 ಮಿಮೀ, ಸುಳ್ಯ 5.3 ಮಿಮೀ, ಮೂಡುಬಿದಿರೆ 2.3 ಮಿಮೀ, ಕಡಬ 27.3 ಮಿಮಿ, ಮೂಲ್ಕಿ 4.1ಮಿಮಿ, ಉಳ್ಳಾಲದಲ್ಲಿ 10.4 ಮಿಮೀ ಮಳೆಯಾಗಿದೆ. ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ, ಜೂ.10ರಿಂದ ಜಿಲ್ಲೆಯಲ್ಲಿ ಮುಂಗಾರು ಚುರುಕುಗೊಳ್ಳುವ ಸಾಧ್ಯತೆಯಿದೆ. ಜೂ.12ರವರೆಗೆ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆಯಿದೆ.

## ರೋಗಿಗಳೊಂದಿಗೆ ಕನ್ನಡದಲ್ಲಿಯೇ ವ್ಯವಹರಿಸಲು ಸೂಚನೆ

• ಉದಯವಾಹಿನಿ, ಮಂಗಳೂರು

ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಗೆ ದಕ್ಷಿಣ ಕನ್ನಡ ಹಾಗೂ ಇತರ ಜಿಲ್ಲೆಗಳಿಂದ ಬಡವರು, ಹೆಚ್ಚಾಗಿ ಕನ್ನಡ ಮಾತನಾಡುವ, ಇತರ ಭಾ?ಗಳ ಅರಿವಿಲ್ಲದ 90% ರೋಗಿಗಳು ಚಿಕಿತ್ಸೆಗಾಗಿ ಬರುತ್ತಿದ್ದು, ವೈದ್ಯರು, ಸ್ನಾತಕೋತ್ತರ ವಿದ್ಯಾರ್ಥಿಗಳು, ಇಂಟರ್ನ್‌ಗಳು ಕನ್ನಡದಲ್ಲಿ ವ್ಯವಹರಿಸದೇ ಇರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿರುವುದಾಗಿ ಹಾಗೂ ಕೆಲವೊಂದು ವೈದ್ಯರುಗಳು ಹಾಗೂ ವಿದ್ಯಾರ್ಥಿಗಳು ರೋಗಿಗಳಿಗೆ/ರೋಗಿಗಳ ಸಂಬಂಧಿಕರಿಗೆ ರೋಗಿಗೆ ನೀಡಲಾಗುತ್ತಿರುವ ಚಿಕಿತ್ಸೆಯ ವಿಧಾನ ಮತ್ತು ಪ್ರಗತಿಯ ಮಾಹಿತಿಯನ್ನು ತಿಳಿಸದೇ ಇರುವುದರಿಂದಲೂ ಜನಪ್ರತಿನಿಧಿಗಳಿಗೆ ಹಾಗೂ ನೇರವಾಗಿ ಕೆಳಸಹಿದಾರರಿಗೆ ಸಾಕಷ್ಟು ದೂರುಗಳು ಬರುತ್ತಿರುವುದು ಕಂಡು ಬಂದಿರುತ್ತದೆ.

ಆದುದರಿಂದ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಬರುವ ರೋಗಿಗಳೊಂದಿಗೆ ಕನ್ನಡದಲ್ಲಿಯೇ ವ್ಯವಹರಿಸಬೇಕು. ಹೊರರಾಜ್ಯದಿಂದ ಬರುವ ವಿದ್ಯಾರ್ಥಿಗಳು ಕಡ್ಡಾಯವಾಗಿ 3 ತಿಂಗಳ ಒಳಗೆ ಕನ್ನಡವನ್ನು ಕಲಿಯಲೇಬೇಕು. ಅಲ್ಲಿಯವರೆಗೆ ರೋಗಿಗಳೊಂದಿಗೆ ವ್ಯವಹರಿಸಲು ವಿಭಾಗಗಳಲ್ಲಿರುವ ಇತರ ಸಿಬ್ಬಂದಿಗಳ ಸಹಾಯ ಪಡೆಯುವಂತೆ ವೆನ್‌ಲಾಕ್ ಅಧೀಕ್ಷಕ ಸೂಚಿಸಿದ್ದಾರೆ.

## ಸಧ್ಯದಲ್ಲೇ ಸಿಎಂ ಡಿಕೆಶಿಯವರಿಂದ ಗಡಿಯಾರ ಗೋಪುರದ ಉದ್ಘಾಟನೆ: ಭರತರೆಡ್ಡಿ

• ಉದಯವಾಹಿನಿ, ಬಳ್ಳಾರಿ

ನಗರದ ಗಡಗಿ ಚೆನ್ನಪ್ಪ ವೃತ್ತದಲ್ಲಿ ನಿರ್ಮಾಣ ಆಗಿರುವ ಬೃಹತ್ ಗಡಿಯಾರ ಗೋಪುರ, ವಾಲ್ಮೀಕಿ ಪುತ್ಥಳಿ ಅನಾವರಣ ಸೇರಿದಂತೆ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಸಧ್ಯದಲ್ಲೇ ನೂತನ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಉದ್ಘಾಟನೆ ಮಾಡಲಿದ್ದಾರೆಂದು ನಗರದ ಶಾಸಕ ನಾರಾ ಭರತ್ ರೆಡ್ಡಿ ಹೇಳಿದ್ದಾರೆ.

ಅವರಿಂದು ನಗರದ 14 ವಾರ್ಡಿನಲ್ಲಿ ಜನರ ಸಮಸ್ಯೆ ಆಲಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮನ್ನು ಭೇಟಿ ಮಾಡಿದ ಮಾಧ್ಯಮಗಳೊಂದಿಗೆ ಮಾತನಾಡುತ್ತಿದ್ದರು.

ನಗರದಲ್ಲಿ ರಸ್ತೆ ಅಭಿವೃದ್ಧಿ, ಸರ್ಕಲ್ ಗಳ ಅಗಲೀಕರಣ ಸೇರಿದಂತೆ ಅನೇಕ ಅಭಿವೃದ್ಧಿ ಯೋಜನೆಗಳು ಮುಕ್ತಾಯಗೊಂಡಿದ್ದು ಅವುಗಳ ಉದ್ಘಾಟನೆ ವಿಳಂಬವಾಗಿವೆ. ಸಿಎಂ ಅವರನ್ನು ಉದ್ಘಾಟನೆಗೆ ಕೋರಿದೆ. ಸಧ್ಯದಲ್ಲೇ ಅವರು ದಿನಾಂಕ ನೀಡಲಿದೆಂದು ಹೇಳಿದ್ದಾರೆಂದರು.

ತುಂಗಭದ್ರ ಡ್ಯಾಂನಿಂದ ನಗರಕ್ಕೆ ಅವಶ್ಯವಾದ ನೀರನ್ನು ಸರಬರಾಜು ಮಾಡುವ ಬೃಹತ್ ಕಾಮಗಾರಿಗೆ ಸಹ ಚಾಲನೆ ನೀಡಲಿದೆ. ಒಟ್ಟಾರೆ ನಗರದ ಅಭಿವೃದ್ಧಿಯ ಕಾಮಗಾರಿಗಳಿಗೆ ತ್ವರಿತಗತಿಯಲ್ಲಿ ಕೈಗೊಳ್ಳುವ ಪ್ರಯತ್ನ ನಡೆದಿದೆಂದರು. ಕಳೆದ ಎರೆಡು ಮೂರು ದಿನಗಳಿಂದ ನಗರದಲ್ಲಿ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚೊನ ಮಳೆ ಆಗಿದ್ದರಿಂದ ವಿದ್ಯುತ್ ವ್ಯತ್ಯಯವಾಗಿತ್ತು. ಇದರಿಂದ ಅಂಡ್ ರ್ ಬ್ರಿಡ್ಜ್ ಗಳಲ್ಲಿ ನಿಒತು ಹೆಚ್ಚೊನ ಸಮಯ ನಿಂತಿತ್ತು. ಅದಕ್ಕೆ ಅನೇಕ ಜನ ಏನೆಲ್ಲ ಮಾತನಾಡಿದ್ದಾರೆ. ಈ ರೀತಿ ಆಗುವುದು ಸಹಜ ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರಕ್ಕೆ ಪ್ರಯತ್ನಿಸಲಿದೆಂದರು.

## ರೈತರ ಸಾಲ ಮನ್ನಾ ಮಾಡಿ 6ನೇ ಗ್ಯಾರಂಟಿಯಾಗಿ ಐತಿಹಾಸಿಕ ದಾಖಲೆ

• ಉದಯವಾಹಿನಿ, ಕಲಬುರಗಿ,

ಐದು ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಜನತೆಗೆ ಅನುಕೂಲವಾಗಿದ್ದು, ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಮತ್ತು ಸಹಕಾರ ಸಂಘ-ಸಂಸ್ಥೆಗಳಿಂದ ಪಡೆದಂತಹ ಬೆಳೆಸಾಲವನ್ನು ಒಮ್ಮೆ ಪೂರ್ತಿ ಮನ್ನಾ ಮಾಡಿ ಆರನೇ ಗ್ಯಾರಂಟಿಯಾಗಿ ಐತಿಹಾಸಿಕ ದಾಖಲೆ ಬರೆಯಬೇಕು ಎಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಡಾ.ಸಿದ್ರಾಮಪ್ಪ ಪಾಟೀಲ ದಂಗಾಪೂರ ಈ ಸಂಬಂಧ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೆ ಪತ್ರ ಬರೆದಿರುವ ಅವರು, ಸಾಲ ಮನ್ನಾ ಮಾಡುವುದರ ಮೂಲಕ ಸಾಲದ ಹೊರೆಯಿಂದ ತೊಂದರೆ ಅನುಭವಿಸುತ್ತಿರುವ ರೈತರಿಗೆ ಆತ್ಮಸ್ಥೈರ್ಯ ತುಂಬಿ ವ್ಯವಸಾಯ ಕಸುಬನ್ನು ಮುಂದುವರೆಸಿಕೊಂಡು ಹೋಗಲು ಅನುಕೂಲ ಮಾಡಿಕೊಡಬೇಕು ಎಂದು ಮನವಿ ಮಾಡಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು, ನೀವು ಅವರ ಮಾತುಗಳನ್ನು ಬಹಳ ಗಮನವಾಗಿ ಕೇಳಬೇಕಾದ ಅಗತ್ಯವಿದೆ. ಇಲ್ಲದಿದ್ದರೆ ಮುಂಬರುವ ಸಮಯಲ್ಲಿ ನೀವೇ ತೊಂದರೆಗೊಳಗಾಗಬಹುದು.

**ವೃಷಭ** ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ಸ್ನೇಹಿತರು ನಿಮ್ಮ ವೈಯಕ್ತಿಕ ಜೀವನದ ಬಗ್ಗೆ ನಿಮಗೆ ಉತ್ತಮ ಸಲಹೆ ನೀಡುತ್ತಾರೆ. ನಿಮ್ಮ ಪ್ರೀತಿಪಾತ್ರರಿಗೆ ಒರಟಾಗಿ ಏನೂ ಹೇಳಬೇಡಿ–ಇಲ್ಲದಿದ್ದರೆ ನೀವು ನಂತರ ಪಶ್ಚಾತ್ತಾಪಪಡಬಹುದು.

**ಮಿಥುನ** ನಿಮ್ಮ ಹಠಾತ್ ಮತ್ತು ಹಠಮಾರಿ ಪ್ರವೃತ್ತಿಯನ್ನು ವಿಶೇಷವಾಗಿ ಪಾರ್ಟಿಗಳಲ್ಲಿ ನಿಯಂತ್ರಿಸಲು ಪ್ರಯತ್ನಿಸಿ ಏಕೆಂದರೆ ಇದು ಪಕ್ಷದ ಮೂಡ್ ಹಾಳು ಮಾಡಬಹುದು. ಹಣದ ಕೊರತೆ ಇಂದು ನಿಮ್ಮ ಮನೆಯಲ್ಲಿ ಅಪಶ್ರುತಿಗೆ ಕಾರಣವಾಗಬಹುದು.

**ಕರ್ಕಾಟಕ** ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಇತರರ ಬಯಕೆ ಮತ್ತು ಆಸಕ್ತಿಯ ಬಗ್ಗೆ ಯೋಚಿಸಿದಲ್ಲಿ ನಿಮಗೆ ಅನಿಯಮಿತ ಸಂತೋಷ ಬರುತ್ತದೆ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು.

**ಸಿಂಹ** ಒತ್ತಡದ ಕೆಲಸದ ವೇಳಾಪಟ್ಟಿ ನಿಮ್ಮ ಸಹನೆಯನ್ನು ಕೆಣಕಬಹುದು. ಇಂದು ಮನೆಯ ಯಾವುದೇ ಎಲೆಕ್ಟ್ರಾನಿಕ್ ಸರಕುಗಳ ಕೆಟ್ಟು ಹೋಗುವ ಕಾರಣದಿಂದಾಗಿ ನಿಮ್ಮ ಹಣ ಖರ್ಚಾಗಬಹುದು. ಅಧ್ಯಯನಗಳನ್ನು ತಪ್ಪಿಸಿ ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆ ನಿಮ್ಮ ಪೋಷಕರಿಗೆ ಕೋಪ ಬರಿಸಬಹುದು.

**ಕನ್ಯಾ** ಕೆಲವು ಬಿಕ್ಕಟ್ಟುಗಳು ಮತ್ತು ಭಿನ್ನಾಭಿಪ್ರಾಯಗಳು ನಿಮಗೆ ಕಿರಿಕಿರಿ ಹಾಗೂ ಆತಂಕವನ್ನು ತರಬಹುದು. ನೀವು ವಿಧ್ಯಾರ್ಥಿಯಾಗಿದ್ದರೆ ಮತ್ತು ವಿದೇಶಕ್ಕೆ ಹೋಗಿ ಅಧ್ಯಯನ ಮಾಡಲು ಬಯಸುತ್ತಿದ್ದರೆ ಆರ್ಥಿಕ ಬಿಕ್ಕಟ್ಟು ಇಂದು ನಿಮ್ಮ ಹಣೆಯ ಮೇಲೆ ಸುಕ್ಕು ತರಬಹುದು.

**ತುಲಾ** ಇಂದು ನೀವು ಆರಾಮವಾಗಿರಬೇಕು ಹಾಗೂ ನಿಕಟ ಸ್ನೇಹಿತರು ಮತ್ತು ಕುಟುಂಬದ ಎಲ್ಲಾ ಸದಸ್ಯರನ್ನು ಸಂತೋಷವಾಗಿರಿಸಲು ಪ್ರಯತ್ನಿಸಬೇಕು. ನೀವು ನಿಮ್ಮನ್ನು ಒಂದು ರೋಮಾಂಚಕಾರಿ ಪರಿಸ್ಥಿತಿಯಲ್ಲಿ ಕಂಡುಕೊಳ್ಳಬಹುದು–ಇದು ನಿಮಗೆ ಆರ್ಥಿಕ ಲಾಭವನ್ನೂ ತರುತ್ತದೆ.

**ವೃಶ್ಚಿಕ** ಮಕ್ಕಳ ನಿಮ್ಮ ಇಚ್ಛೆಯಂತೆ ನಡೆದುಕೊಳ್ಳುವುದಿಲ್ಲ ಹಾಗೂ ಇದು ನಿಮಗೆ ಕೋಪ ತರುತ್ತದೆ. ಅನಿಯಂತ್ರಿತ ಕೋಪ ಸಾಮಾನ್ಯವಾಗಿ ಎಲ್ಲರನ್ನೂ, ಹಾಗೂ ವಿಶೇಷವಾಗಿ ಕೋಪಗೊಂಡವರನ್ನು ಹೆಚ್ಚು ಘಾಸಿಗೊಳಿಸುತ್ತದೆ. ಏಕೆಂದರೆ ಇದು ಶಕ್ತಿಯನ್ನು ಕುಂಠಿತಗೊಳಿಸುತ್ತದೆ

**ಧನಸ್ಸು** ನಿಕಟ ಸಂಬಂಧಿಗಳ ಮನೆಗೆ ಹೋಗುವುದರಿಂದ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಬಹುದು. ಸ್ನೇಹಿತರ ಸಂಗ ಆರಾಮ ಒದಗಿಸುತ್ತದೆ. ನಿಮ್ಮನ್ನು ದೀರ್ಘಕಾಲ ಹಿಡಿದಿಟ್ಟಿರುವ ಒಂದು ಏಕಾಂಗಿ ಹಂತ ನಿಮ್ಮ ಜೀವನ ಸಂಗಾತಿ ದೊರಕಿದ ತಕ್ಷಣ ಕೊನೆಗೊಳ್ಳುತ್ತದೆ.

**ಮಕರ** ಅದೃಷ್ಟವನ್ನು ಅವಲಂಬಿಸಬೇಡಿ, ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದೆ. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಇಂದು ಉತ್ತಮ ಬೆಲೆಗೆ ಮಾರಾಟ ಮಾಡಬಹುದು, ಅದು ನಿಮಗೆ ಲಾಭದಾಯಕವಾಗಲಿದೆ.

**ಕುಂಭ** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಒಂದು ಒಳ್ಳೆಯ ಸುದ್ದಿ ಪಡೆಯುವ ಸಾಧ್ಯತೆಯಿದ್ದು ಇದು ನಿಮ್ಮನ್ನಷ್ಟೇ ಅಲ್ಲದೇ ನಿಮ್ಮ ಕುಟುಂಬವನ್ನೂ ಉತ್ಸಾಹಿಗಳನ್ನಾಗಿಸುತ್ತದೆ.

**ಮೀನ** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ರಿಯಲ್ ಎಸ್ಟೇಟ್ ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ನೀವು ಗುಂಪಿನ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡರೆ ನೀವು ಹೊಸ ಸ್ನೇಹಿತರನ್ನು ಸಂಪಾದಿಸುತ್ತೀರಿ.

# ಸಚಿವ ಸ್ಥಾನಕ್ಕಾಗಿ ದಾವಣಗೆರೆ ಶಾಸಕರ ಪಟ್ಟು: ಆಡಿಯೋ ವೈರಲ್‌ನಿಂದ ಜಮೀರ್‌ಗೆ ಹಿನ್ನಡೆ?

**ಎಸ್‌ಎಸ್ ಮಲ್ಲಿಕಾರ್ಜುನ್, ಶಿವಗಂಗಾ ಬಸವರಾಜ್ ಮತ್ತು ಡಿಜಿ ಶಾಂತನಗೌಡ್ರು ಅವರಿಗೆ ಎರಡನೇ ಪಟ್ಟಿಯಲ್ಲಿ ಸಚಿವ ಸ್ಥಾನ ನೀಡಬೇಕೆಂಬ ಕೂಗು ಕೇಳಿಬಂದಿದೆ.**

• **ಉದಯವಾಹಿನಿ, ದಾವಣಗೆರೆ**

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯು ಕೆಲ ಕಾಂಗ್ರೆಸ್‌ನಾಯಕರ ಮೇಲೆ ಪರಿಣಾಮ ಬೀರಿದೆ. ಇದೀಗ ಜಮೀರ್ ಅಹಮದ್ ಅವರಿಗೂ ಸಚಿವ ಸ್ಥಾನ ಕೈ ತಪ್ಪಿದೆ. ಈ ಮಧ್ಯೆ ಜಿಲ್ಲೆಯಲ್ಲಿ ಎಸ್ ಎಸ್‌ಮಲ್ಲಿಕಾರ್ಜುನ್, ಶಿವಗಂಗಾ ಬಸವರಾಜ್ ಮತ್ತು ಡಿಜಿ ಶಾಂತನಗೌಡ್ರು ಸಚಿವ ಸ್ಥಾನದ ರೇಸಿನಲ್ಲಿದ್ದಾರೆ.

ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ವಿರೋಧದ ನಡುವೆಯೂ ಸಮರ್ಥ್ ಶಾಮನೂರುಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದು ಕೆಲ ಅಲ್ಪಸಂಖ್ಯಾತ ನಾಯಕರ ಅಸಮಾಧಾನ ಕಾರಣವಾಗಿತ್ತು. ಬಳಿಕ ಪಕ್ಷ ವಿರೋಧಿ ಚಟುವಟಿಕೆಯ ಆರೋಪದ ಕೆಲವರ ವಿರುದ್ಧ ಹೈಕಮಾಂಡ್ ಕ್ರಮವನ್ನು ಕೈಗೊಂಡಿದೆ.

ಇದೀಗ ಕಾಂಗ್ರೆಸ್ ಮುಖಂಡ ಮೊಹಮ್ಮದ್ ಸಿರಾಜ್ ಅವರ ಜೊತೆ ಮಾತನಾಡಿದ್ದಾರೆ ಎನ್ನಲಾದ ಆಡಿಯೋ ಒಂದು ವೈರಲ್ ಆಗಿದ್ದು, ಜಮೀರ್ ಅಹಮದ್‌ಗೆ ಸಚಿವ ಸ್ಥಾನ ಕೈ ತಪ್ಪಲು ಕಾರಣ ಎನ್ನಲಾಗುತ್ತಿದೆ.

**ಸಚಿವ ಸ್ಥಾನ ನೀಡುವಂತೆ ಕಟ್ಟಾ ಬೆಂಬಲಿಗರು ಪ್ರತಿಭಟನೆ:** ಮೊದಲ ಸುತ್ತಿನಲ್ಲಿ ಜಮೀರ್ ಅವರಿಗೆ ಸಚಿವ ಸ್ಥಾನ ಸಿಗದಿರುವುದಕ್ಕೆ ದಾವಣಗೆರೆ ಮುಸ್ಲಿಂ ಸಮುದಾಯದವರು ಆಕ್ರೋಶ ಹೊರಹಾಕಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಅಲ್ಪಸಂಖ್ಯಾತರು ಜಮೀರ್‌ಗೆ ಸಚಿವ ಸ್ಥಾನ ನೀಡಬೇಕೆಂದು ಪ್ರತಿಭಟನೆ ಮಾಡಿದ್ದಾರೆ. ಜಮೀರ್‌ಗೆ ಸಚಿವ ಸ್ಥಾನ ನೀಡದಿದ್ರೆ 2028 ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಕೆ ರವಾನಿಸಿದ್ದಾರೆ. ಹಾಗೆಯೇ ಆಡಿಯೋ ವೈರಲ್ ಮಾಡಿ ಜಮೀರ್ ಅವರಿಗೆ ಸಚಿವ ಸ್ಥಾನ ತಪ್ಪಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಮುಸ್ಲಿಂ ಮುಖಂಡ ಮನ್ಸೂರ್ ಅಲಿ ಮಾತನಾಡಿ, ಜಮೀರ್ ಅವರು ಒಂದೇ ಸಮಾಜಕ್ಕೆ ಸೀಮಿತ ಆಗಿಲ್ಲ. ಅವರು ಎಲ್ಲಾ ಸರ್ವಜನಾಂಗಕ್ಕೂ ನಾಯಕರಾಗಿದ್ದಾರೆ. ರಾಜ್ಯ ಅಲ್ಲದೇ ಇಡೀ ರಾಷ್ಟ್ರದಲ್ಲಿ ವರ್ಚಸ್ ಇರುವ ನಾಯಕ ಕೂಡ ಹೌದು. ಅವರಿಗೆ ಡಿಸಿಎಂ ಇಲ್ಲ, ಸಚಿವ ಸ್ಥಾನ ನೀಡದಿದ್ದರೆ ದಾವಣಗೆರೆಯಿಂದ ಬೆಂಗಳೂರುವರೆಗೆ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳುತ್ತೇವೆ ಮತ್ತು ಬೆಂಗಳೂರಿನಲ್ಲಿ ಅಹೋರಾತ್ರಿ ಧರಣಿ ಮಾಡುವುದಾಗಿ ಎಂದು ಎಚ್ಚರಿಕೆ ನೀಡಿದರು.

**ಜಮೀರ್ ವಿರುದ್ಧ ಹೈಕಮಾಂಡ್‌ಗೆ ದೂರು:** ಆಡಿಯೋ ವೈರಲ್ ಬೆನ್ನಲ್ಲೇ ಸೂಕ್ತ ಕ್ರಮಕ್ಕೆ ಒತ್ತಾಯಿಸಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ ಬಸವರಾಜ್ ಅವರು ಜಮೀರ್ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಿದ್ದಾರೆ. ಜೊತೆಗೆ ಪಕ್ಷಕ್ಕೆ ದ್ರೋಹ ಬಗೆದವರಿಗೆ ಸಚಿವ ಸ್ಥಾನ ಕೊಡಬಾರದೆಂದು ಆಗ್ರಹಿಸಿದ್ದಾರೆ.

**ಎಸ್ ಎಸ್ ಮಲ್ಲಿಕಾರ್ಜುನ್‌ಗೆ ಸಚಿವ ಸ್ಥಾನಕ್ಕೆ ಆಗ್ರಹ:** ಎಸ್ ಎಸ್ ಮಲ್ಲಿಕಾರ್ಜುನ್ ಅವರಿಗೂ ಸಚಿವ ಸ್ಥಾನ ನೀಡಬೇಕೆಂಬ ಕೂಗು ದಾವಣಗೆರೆಯಲ್ಲಿ ಕೇಳಿಬರುತ್ತಿದೆ. ಮೊದಲ ಸುತ್ತಿನಲ್ಲಿ ಇವರಿಗೆ ಸಚಿವ ಸ್ಥಾನ ಸಿಗದೆ ಇರುವುದು ಬೆಂಬಲಿಗರಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಸಚಿವ ಸಂಪುಟ ಸಭೆಯಲ್ಲಿ ದಾವಣಗೆರೆಗೆ ಸಚಿವ ಸ್ಥಾನ ಸಿಗುತ್ತೆ ಅನ್ನೋ ನಿರೀಕ್ಷೆ ಇತ್ತು. ಆದ್ರೆ ಸಿಕ್ಕಿಲ್ಲ, ಇದರಿಂದ ನಿರಾಸೆ ಆಗಿದೆ. ಉಳಿದ 20 ಸ್ಥಾನಗಳಲ್ಲಿ ಮಲ್ಲಿಕಾರ್ಜುನ್ ಅವರಿಗೆ ಸಚಿವ ಸ್ಥಾನ ನೀಡಬೇಕು.



ಉದಯವಾಹಿನಿ ಚಿತ್ರ

> ವೈರಲ್ ಆಡಿಯೋ ಎಫ್‌ಎಸ್‌ಎಲ್‌ಗೆ ಕಳುಹಿಸಿ ತನಿಖೆ ಮಾಡಬೇಕು. ತಪ್ಪು ಮಾಡಿಲ್ಲ ಎಂದರೆ ಮಂಪರು ಪರೀಕ್ಷೆಗೆ ಸ್ವಯಂಪ್ರೇರಿತರಾಗಿ ಒಳಗಾಗುತ್ತೇನೆ ಎಂದು ಸವಾಲು ಹಾಕಲಿ. ತಪ್ಪು ಮಾಡಿ ನುಣುಚಿಕೊಳ್ಳಲು ಎಐ ಸೃಷ್ಟಿ ಅಂತಾ ನೆಪ ಹೇಳಬಾರದು ಎಂದು ಕಿಡಿಕಾರಿದ್ದಾರೆ.
> –ಬಸವರಾಜ್

**ಜಮೀರ್‌ರನ್ನು ಪಕ್ಷದಿಂದ ಉಚ್ಚಾಟನೆ**

ಜಮೀರ ಅಹ್ಮದ್, ಮೊಹಮ್ಮದ್ ಸಿರಾಜ್ ಆಡಿಯೋ ವೈರಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಬಸವರಾಜ್ ಮಾತನಾಡಿ, ಜಮೀರ್‌ರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕು. ಮಡಿಕೇರಿಯಿಂದ ಬಂದ ಅಭ್ಯರ್ಥಿ ಮನೆಗೆ ನೀಡಿದ್ದಾರೆ. ದಾವಣಗೆರೆಗೆ ಬರಲು ಹಣ ಇಲ್ಲದವನ ಬಳಿ ಕೋಟ್ಯಂತರ ರೂ. ಹೇಗೆ ಬಂತು. ತಪ್ಪು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದೇವೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ನಾಯಕರಿಗೆ ಇ-ಮೇಲ್ ಮೂಲಕ ದೂರು ನೀಡಿದ್ದೇವೆ ಎಂದರು.

## ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ವಿತರಿಸಿ: ಗಂಗಾಣಿ

• **ಉದಯವಾಹಿನಿ .ಚಿಂಚೋಳಿ;**

ತಾಲ್ಲೂಕು ಮತ್ತು ಕಾಳಗಿ ತಾಲ್ಲೂಕುಗಳಲ್ಲಿ ರೈತರು ಬಿತ್ತನೆ ಪ್ರಾರಂಭ ಮಾಡಲಾಗಿದ್ದು ಆದರೆ ಎರಡು ತಾಲ್ಲೂಕಿನ ರೈತರು ಆಯಾ ವ್ಯಾಪ್ತಿ ರೈತ ಸಂಪರ್ಕ ಕೇಂದ್ರಕ್ಕೆ ಹೋಗಿ ಬೀಜ ರಸಗೋಬ್ಬರ ತಂದು ಬಿತ್ತನೆ ಮಾಡಲು ಸರದಿಸಾಲುದಿಂದ ದಿನ ಕಳೆಯುತ್ತಿವೆ ಹಾಗಾಗಿ ರೈತರಿಗೆ ಬೀಜ, ರಸಗೋಬ್ಬರ, ಕೃಷಿ ಸಲಕರಣೆಗಳು ವಿತರಿಸಲು ಆಯಾ ವ್ಯಾಪ್ತಿಯ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ವಿತರಣೆ ಮಾಡಲು ಪರವಾನಿಗೆ ನೀಡಿದರೆ ರೈತರಿಗೆ ಅನುಕೂಲವಾಗುತ್ತದೆ ಎಂದು ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಅಧ್ಯಕ್ಷ ವೀರಣ್ಣ ಗಂಗಾಣಿ ಒತ್ತಾಯಿಸಿದರು. ಪಟ್ಟಣದ ಕೃಷಿ ಇಲಾಖೆ ಎದುರು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ನೇತೃತ್ವದಲ್ಲಿ ರೈತರು ಒಗ್ಗೂಡಿ ಕೃಷಿ ಪತ್ತಿನ ಸಹಕಾರ ಸಂಘದ ಮೂಲಕ ರೈತರಿಗೆ ಬಿತ್ತನೆ ಬೀಜ ರಸಗೋಬ್ಬರ ವಿತರಿಸುವಂತೆ ಆಗ್ರಹಿಸಿ ಕೃಷಿ ಅಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿ ಅವರು ಮಾತನಾಡಿದರು.





ಉದಯವಾಹಿನಿ ಚಿತ್ರ

ಈಗಾಗಲೇ ಅವಳಿ ತಾಲ್ಲೂಕುಗಳಲ್ಲಿ 40ಕ್ಕೂ ಹೆಚ್ಚು ಸಂಘ ಸಂಸ್ಥೆಗಳಿದ್ದು ಆದರೆ ಸಂಘಗಳ ಕೆಲಸವಿಲ್ಲದಿದ್ದರೂ ಅದರ ಕೆಲಸವೇನು, ಈಗಾಗಲೇ 1,10,000ಹೇಕ್ಟರ್ ಬಿತ್ತನೆ ಕ್ಷೇತ್ರವಿದ್ದು ರೈತರು ರೈತ ಸಂಪರ್ಕ ಕೇಂದ್ರ ಎದುರು ಸರಧಿ ಸಾಲಿನಲ್ಲಿ ಊಟ ನೀರು ಇಲ್ಲದೆ ನಿಂತುಕೋಂಡು ಸರದಿ ಬರದೆ ರೈತರು ನಿರಾಸೆಯಿಂದ ಮನೆಕಡೆ ಹೋಗುತ್ತಿದ್ದು ಅದಕ್ಕಾಗಿ ಜಿಲ್ಲಾಡಳಿತ ಸರ್ಕಾರ ಮುತುರ್ವಜಿ ವಹಿಸಿ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಬೀಜ ರಸಗೋಬ್ಬರ ವಿತರಿಸಲು ಪರವಾನಿಗೆ ನೀಡಿದರೆ ರೈತರಿಗೆ ಸಮೀಪವು ಆಗುತ್ತೇ ಹಾಗೂ ಸಮಯಕ್ಕೆ ಬೀಜ ರಸಗೋಬ್ಬರ ಸಿಗುತ್ತೆ ರೈತರಿಗೆ ಬಿತ್ತನೆ ಮಾಡಲು ಅನುಕೂಲವಾಗುತ್ತದೆ.

ಪರವಾನಿಗೆ ಇಲ್ಲದ ಸೂಸೈಟಿಗೆ, ಪರವಾನಿಗೆ ಪಡೆದ ಸೂಸೈಟಿಯಿಂದ ರಸಗೊಬ್ಬರ ಬೀತ್ತನೆ ಬೀಜ ನೀಡಿ ವಿತರಿಸಲು ಅನುವು ಮಾಡಿಕೊಡಬೇಕು, ಬೀದರ ಡಿಸಿಸಿ ಬ್ಯಾಂಕ್ ಮಾದರಿಯಂತೆ ಎಲ್ಲಾ ಸಹಕಾರ ಸಂಘಗಳಿಗೂ ರಸಗೋಬ್ಬರ ಸರಬುರಾಜು ಮಾಡಲು ಅನುವು ಮಾಡಿಕೋಡಬೇಕು ಮತ್ತು ಹಣದ ಕೊರತೆ ಇದ್ದಂಹ ಸಂಘಗಳಿಗೆ ಸಿಸಿ ಸಾಲವನ್ನು ಒದಗಿಸಿ ರಸಗೋಬ್ಬರ ಮಾರಾಟ ಮಾಡಲು ಅನುವು ಮಾಡಿಕೊಡಬೇಕು ಎಂದರು.

**ರೈತರು:** ಮಲ್ಲಿಕಾರ್ಜುನ್ ಕೊಡದೂರ, ಕೆಎಂ ಬಾರಿ, ಚಂದ್ರಶೇಖರ, ಸಿದ್ರಾಮಪ್ಪ, ರಾಜಶೇಖರ ಪಾಟೀಲ್, ಗೋಪಾಲ ಕೆರೋಳ್ಳಿ, ಮಂಜುನಾಥ ರುದ್ನೂರ, ಗೋಪಾಲ ಗರಪಳ್ಳಿ, ಚಿತ್ರಶೇಖರ ಗಡಿಕೇಶ್ವಾರ, ಸೇರಿದಂತೆ ಅನೇಕರಿದ್ದರು.

## ಗುಂಡಗುರ್ತಿ ಗ್ರಾಮ ಪಂಚಾಯತಿಗೆ ಜಿಪಂ ಸಿಇಒ ಭೇಟಿ; ಸಮೃದ್ಧಿ ಯೋಜನೆ ಕಾಮಗಾರಿ ವೀಕ್ಷಣೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕಲಬುರಗಿ**

ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆಗಾಗಿ ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶರಣಪ್ಪ ಸಂಕನೂರ ಅವರು ಚಿತ್ತಾಪೂರ ತಾಲ್ಲೂಕಿನ ಗುಂಡಗುರ್ತಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಗುಂಡಗುರ್ತಿ ಗ್ರಾಮದಲ್ಲಿ ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿಯ ಸಮೃದಿ ಯೋಜನೆ ಕಾಮಗಾರಿಗಳನ್ನು ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ರಜನಿಕಾಂತ ಶೃಂಗೇರಿ, ಗ್ರಾಂ.ಪಂ. ಕಿರಿಯ ಅಭಿಯಂತರರು, ಗ್ರಾಂ.ಪಂ. ಅಭಿವೃದ್ಧಿ ಅಧಿಕಾರಿಗಳು, ಮಾಜಿ ಗ್ರಾಂ.ಪಂಚಾಯತ ಅಧ್ಯಕ್ಷರು ಹಾಗೂ ಗ್ರಾಮದ ಮುಖಂಡರಾದ ಶ್ರೀನಿವಾಸ ಬಣ್ಣಕ್ಕಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

## ಉದ್ಯಮಿಗೆ ಹನಿಟ್ರ್ಯಾಪ್ ಮಾಡಿ 2.77 ಕೋಟಿ ಲೂಟಿ

• **ಉದಯವಾಹಿನಿ, ಮಂಗಳೂರು:**

ನಗರದಲ್ಲಿ ಗುತ್ತಿಗೆ ಕಂಪನಿ ನಡೆಸುತ್ತಿದ್ದ ಉದ್ಯಮಿಗೆ ಕಂಪನಿಯ ಇಬ್ಬರು ಕೆಲಸಗಾರರೇ ಹನಿಟ್ರ್ಯಾಪ್ ಹಾಗೂ ಬ್ಲ್ಯಾಕ್ ಮೇಲ್ ಮಾಡಿ 2.77 ಕೋಟಿ ರೂ. ವಸೂಲಿ ಮಾಡಿ, ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿರುವ ಬಗ್ಗೆ ಉರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿತೇಶ್ ಮತ್ತು ನಿಜಾಮ್ ಅಲಿಯಾಸ್ ಇಬ್ರಾಹಿಂ ಹನಿಟ್ರ್ಯಾಪ್ ಮಾಡಿರುವ ಆರೋಪಿಗಳು. ಇವರಲ್ಲಿ ನಿಜಾಮ್ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದಾನೆ. ಇವರಿಬ್ಬರನ್ನು ಉರ್ವ ಪೊಲೀಸರು ಬಂಧಿಸಿದ್ದಾರೆ ಎಂದು ಮಂಗಳೂರು ನಗರ ಪೊಲೀಸ್ ಕಮೀಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

2024ರಿಂದ ಬೆದರಿಕೆ: 2024ರ ಜನವರಿಯಲ್ಲಿ ಜಿತೇಶ್ ಎಂಬಾತ ಉದ್ಯಮಿಯ ಮೊಬೈಲ್‌ಗೆ ಕರೆ ಮಾಡಿ ಅವರು ಮತ್ತು ಆತ ಒಟ್ಟಿಗೆ ಇರುವ ಅಶ್ಲೀಲ ಫೋಟೋವನ್ನು ಕಳುಹಿಸಿ, ವಿಡಿಯೋ ಕೂಡಾ ಇರುವುದಾಗಿ ಹೇಳಿದ್ದಲ್ಲದೆ, ಅದನ್ನು ವೈರಲ್ ಮಾಡುವುದಾಗಿ ಜತೆಗೆ ಅವರ ಹೆಂಡತಿಗೂ ಕಳುಹಿಸುವುದಾಗಿ ಬೆದರಿಕೆ ಹಾಕಿ 35 ಲಕ್ಷ ರೂ.ಗೆ ಬೇಡಿಕೆಯಿಟ್ಟಿದ್ದ. ದೂರುದಾರರು ಮರ್ಯಾದೆ ಹೋಗುತ್ತದೆ ಎಂದು ಆತ ತಿಳಿಸಿದಂತೆ ಫೆಬ್ರವರಿಯಲ್ಲಿ ಕದ್ರಿ ಬಳಿಯ ಹೋಟೆಲ್?ವೊಂದಕ್ಕೆ ಹೋಗಿದ್ದಾರೆ. ಅಲ್ಲಿ ಜಿತೇಶ್ 35 ಲಕ್ಷ ರೂ. ಕೊಡದಿದ್ದರೆ ಸುಮ್ಮನೆ ಬಿಡುವುದಿಲ್ಲ ಮತ್ತು ಕೊಲೆ ಮಾಡುವುದಾಗಿ ಬೆದರಿಸಿದ್ದಾನೆ.

## ಆಯುಷ್ಮಾನ್ ಭಾರತ್ ಫಲಾನುಭವಿಗಳಿಂದ ಹಣ ವಸೂಲಿ ಮಾಡಿದರೆ ಕಠಿಣ ಕ್ರಮ: ಸಚಿವ ಯು.ಟಿ. ಖಾದರ್ ಎಚ್ಚರಿಕೆ

• **ಉದಯವಾಹಿನಿ, ಮಂಗಳೂರು:**

ಖಾಸಗಿ ಆಸ್ಪತ್ರೆಗಳು ಆಯುಷ್ಮಾನ್ ಭಾರತ್ ಯೋಜನೆಯ ಫಲಾನುಭವಿಗಳಿಗೆ ಸಂಪೂರ್ಣ ನಗದುರಹಿತ ಚಿಕಿತ್ಸೆ ನೀಡದೆ ಹಣ ಪಾವತಿಸುವಂತೆ ಒತ್ತಾಯಿಸುತ್ತಿರುವ ಬಗ್ಗೆ ಬಂದಿರುವ ದೂರುಗಳ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು ಟಿ ಖಾದರ್ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಅರ್ಹ ರೋಗಿಗಳಿಂದ ಖಾಸಗಿ ಆಸ್ಪತ್ರೆಗಳು ಹಣ ಪಾವತಿಸುವಂತೆ ಒತ್ತಾಯಿಸಿದರೆ, ಸಂಬಂಧಿತ ಆರೋಗ್ಯ ಮಿತ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು. ಆಯುಷ್ಮಾನ್ ಭಾರತ್ ಯೋಜನೆಯಡಿ ವಿಶೇಷ ವಾರ್ಡ್‌ಗಳನ್ನು ಆಯ್ಕೆ ಮಾಡುವ ರೋಗಿಗಳಿಗೂ ಸೌಲಭ್ಯವನ್ನು ವಿಸ್ತರಿಸುವ ಕುರಿತು ಸರ್ಕಾರ ಚಿಂತನೆ ನಡೆಸುತ್ತಿದೆ. ಈ ವ್ಯವಸ್ಥೆಯಲ್ಲಿ ರೋಗಿಗಳು ವಿಶೇಷ ವಾರ್ಡ್‌ಗೆ ಸಂಬಂಧಿಸಿದ ಹೆಚ್ಚುವರಿ ಶುಲ್ಕವನ್ನು ಮಾತ್ರ ಪಾವತಿಸಬೇಕಾಗುತ್ತದೆ ಎಂದು ಖಾದರ್ ಹೇಳಿದರು.

> ಗ್ರಾಮೀಣ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆಯನ್ನು ನಿವಾರಿಸುವ ಉದ್ದೇಶದಿಂದ, ಗಿರಿಜನ, ಗುಡ್ಡಗಾಡು ಹಾಗೂ ದುರ್ಗಮ ಪ್ರದೇಶಗಳಲ್ಲಿ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರ ವೇತನ ಹೆಚ್ಚಿಸುವ ಬೇಡಿಕೆಯನ್ನು ಸರ್ಕಾರ ಪರಿಗಣಿಸಲಿದೆ ಎಂದು ಹೇಳಿದರು. – ಯು ಟಿ ಖಾದರ್



ಉದಯವಾಹಿನಿ ಚಿತ್ರ

ಇದಕ್ಕೂ ಮೊದಲು, ಹಿರಿಯ ಆರೋಗ್ಯ ಅಧಿಕಾರಿಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು ಸಮಯಪಾಲನೆ ಮಾಡಬೇಕು ಹಾಗೂ ರೋಗಿಗಳನ್ನು ಮಾನವೀಯತೆ ಮತ್ತು ಸೌಜನ್ಯದಿಂದ ನೋಡಿಕೊಳ್ಳಬೇಕು ಎಂದು ಸಚಿವರು ಸೂಚಿಸಿದರು. ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಿಂದಲೇ ಸಿಸಿಟಿವಿ ಸಂಪರ್ಕದ ಮೂಲಕ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯವೈಖರಿಯನ್ನು ಮೇಲ್ವಿಚಾರಣೆ ಮಾಡುವ ಕೇಂದ್ರೀಕೃತ ವ್ಯವಸ್ಥೆ ರೂಪಿಸುವ ಸಾಧ್ಯತೆಯನ್ನು ಪರಿಶೀಲಿಸುವಂತೆ ಅವರು ಜಿಲ್ಲಾ ಆರೋಗ್ಯಾಧಿಕಾರಿಗೆ ನಿರ್ದೇಶನ ನೀಡಿದರು.

ದೃಢೀಕರಣ ಪ್ರಕ್ರಿಯೆಯಿಂದಾಗಿ ಆಯುಷ್ಮಾನ್ ಭಾರತ್ ಯೋಜನೆಯ ಸೌಲಭ್ಯ ಪಡೆಯಲು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

## ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ–ಆಶಾ ಕಾರ್ಯಕರ್ತೆಯರ ಪ್ರತಿಭಟನೆ

• **ಉದಯವಾಹಿನಿ, ಹೊಸಪೇಟೆ.**

ಆಶಾ ಕಾರ್ಯಕರ್ತೆಯರ 5 ತಿಂಗಳ ಬಾಕಿ ಇನ್ಸೆಂಟಿವ್ ಹಾಗೂ ಒಂದು ತಿಂಗಳ ನಿಶ್ಚಿತ ಗೌರವ ಧನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಜಿಲ್ಲಾ ಆರೋಗ್ಯಾಧಿಕಾರಿಗಳ ಕಛೇರಿ ಎದುರು ಎಐಯುಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಆಶಾ ಕಾರ್ಯಕರ್ತೆಯರು ನಂತರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾದಿ ಡಾ.ಎಲ್. ಆರ್. ಶಂಕರ್ ನಾಯಕ್ ಅವರಿಗೆ ಬೇಡಿಕೆಗಳ ಮನವಿಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಜಿಲ್ಲಾ ಗೌರವಾಧ್ಯಕ್ಷ





ಉದಯವಾಹಿನಿ ಚಿತ್ರ

ಡಾ. ಪ್ರಮೋದ್, ಒಂದು ತಿಂಗಳ ಹಿಂದೆ ಇದೇ ಸಮಸ್ಯೆ ಪರಿಹರಿಸಲು ಮನವಿ ನೀಡಲಾಗಿತ್ತು. ಜೊತೆಗೆ ರಾಜ್ಯಾದ್ಯಂತ ಹೋರಾಟದ ಫಲವಾಗಿ 20 ದಿನ ಹಿಂದೆ ಎಲ್ಲಾ ಜಿಲ್ಲೆಗಳು ಸೇರಿ ಇನ್ಸೆಂಟಿವ್ ಹಣ ರೂ.260 ಕೋಟಿ ಬಿಡುಗಡೆಯಾಗಿದೆ. ಇದರಲ್ಲಿ ವಿಜಯನಗರ ಜಿಲ್ಲೆಗೆ 5.6 ಕೋಟಿ ನಿಗದಿಯಾಗಿದೆ.

ತಾಂತ್ರಿಕ ಸಮಸ್ಯೆಯ ಹೆಸರಲ್ಲಿ ಇಲ್ಲಿಯವರಿಗೂ ಆಶಾಗಳಿಗೆ ತಾವು ದುಡಿದ ಹಣ ಅವರ ಕೈ ತಲುಪಿಲ್ಲ. ಈಗಾಗಲೆ ಶಾಲೆಗಳು ಪ್ರಾರಂಭವಾಗಿವೆ, ಅಗತ್ಯ ವಸ್ತುಗಳ ದುಬಾರಿಯಾಗುತ್ತಲೇ ಇವೆ. ಇಂತಹ ಸಂದರ್ಭದಲ್ಲಿ ಆಶಾಗಳ ಬದುಕಿನ ಜೊತೆಗೆ ಚೆಲ್ಲಾಟವಾಡುವುದು ಅತ್ಯಂತ ಖಂಡನೀಯ.

ಈ ಹಿನ್ನಲೆಯಲ್ಲಿ ಕೂಡಲೆ ಆಶಾಗಳಿಗೆ ಸಲ್ಲಬೇಕಾದ ಗೌರವ ಧನ ಹಾಗೂ ಇನ್ಸೆಂಟಿವ್ ಹಣ ಬಿಡುಗಡೆ ಮಾಡಬೇಕು. ಮತ್ತಷ್ಟು ವಿಳಂಬವಾದಲ್ಲಿ ಉಗ್ರ ಹೋರಾಟಕ್ಕೆ ತಯಾರಾಗುವುದಾಗಿ ಎಚ್ಚರಿಸಿದರು.

## ತಾಳ್ಮೆಯಿಂದ ಕಾಯುವವರಿಗೆ ಗೌರವ ಸಿಗುತ್ತದೆ: ಸತೀಶ್ ಜಾರಕಿಹೊಳಿ

• **ಉದಯವಾಹಿನಿ, ಬೆಳಗಾವಿ:**



ಉದಯವಾಹಿನಿ ಚಿತ್ರ

ಪಕ್ಷದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ ಮತ್ತು ಎಲ್ಲರಿಗೂ ಒಂದೇ ವೇಳೆ ಉನ್ನತ ಹುದ್ದೆಗಳನ್ನು ನೀಡುವುದು ಸಾಧ್ಯವಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿಯವರು ಹೇಳಿದ್ದಾರೆ.

ಸಚಿವ ಸಂಪುಟ ವಿಸ್ತರಣೆ ಮತ್ತು ಪಕ್ಷದ ಪ್ರಮುಖ ಹುದ್ದೆಗಳ ನೇಮಕಾತಿ ಬಳಿಕ ಕಾಂಗ್ರೆಸ್‌ನಲ್ಲಿ ಅಸಮಾಧಾನ ಉಂಟಾಗಿದೆ ಎಂಬ ಚರ್ಚೆಗಳ ಕುರಿತು ಜಾರಕಿಹೊಳಿಯವರು ಸ್ಪಷ್ಟನೆ ನೀಡಿದ್ದಾರೆ. ಬೆಳಗಾವಿಯ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ್ ಪಕ್ಷದ ಹಿರಿಯ ನಾಯಕರಾಗಿದ್ದು, ಅವರಿಗೆ ಹೈಕಮಾಂಡ್ ನೀಡಿರುವ ಜವಾಬ್ದಾರಿಯ ಬಗ್ಗೆ ಕಾರ್ಯಕರ್ತರು ತೃಪ್ತಿಪಡಬೇಕು ಎಂದು ಹೇಳಿದರು. ''ಪಕ್ಷದಲ್ಲಿ ಯಾರಿಗೂ ನ್ಯಾಯ ಸಿಕ್ಕಿಲ್ಲ ಎನ್ನುವ ಪ್ರಶ್ನೆಯೇ ಇಲ್ಲ. ಎಲ್ಲರಿಗೂ ಎಲ್ಲವೂ ಒಂದೇ ಸಮಯದಲ್ಲಿ ಸಿಗಲು ಸಾಧ್ಯವಿಲ್ಲ. ಪರಮೇಶ್ವರ್ ನಮ್ಮ ನಾಯಕರು. ಅವರಿಗೆ ಹೈಕಮಾಂಡ್ ಮಹತ್ವದ ಜವಾಬ್ದಾರಿ ನೀಡಿದೆ. ಆದರಿಂದ ನಾವು ತೃಪ್ತಿಪಡಬೇಕು'' ಎಂದು ತಿಳಿಸಿದರು. ತಮಗೆ ಉಪ ಮುಖ್ಯಮಂತ್ರಿ ಅಥವಾ ಕೆಪಿಸಿಸಿ ಅಧ್ಯಕ್ಷ ಹುದ್ದೆ ಸಿಗದಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷವು 'ಒಬ್ಬ ನಾಯಕ–ಒಂದು ಹುದ್ದೆ' ಎಂಬ ತತ್ವವನ್ನು ಅನುಸರಿಸುತ್ತಿದೆ. ಹೀಗಾಗಿ ನನ್ನನ್ನು ಕೆಪಿಸಿಸಿ ಅಧ್ಯಕ್ಷ ಹುದ್ದೆಯ ಸ್ಪರ್ಧೆಯಲ್ಲಿ ಪರಿಗಣಿಸಲ್ಪಟ್ಟಿಲ್ಲ ಎಂದರು.

## ಆಟೋದಲ್ಲಿದೆ ಮಿನಿ ಲೈಬ್ರರಿ: ಪುಸ್ತಕ ಓದುವ ಆಸಕ್ತಿ ಮೂಡಿಸಲು ರಿಕ್ಷಾ ಚಾಲಕನ ವಿನೂತನ ಪ್ರಯತ್ನ!





ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮಂಗಳೂರು:**

ವೇಗದ ಬದುಕು, ಮೊಬೈಲ್‌ಗಳ ಆಕರ್ಷಣೆ ಮತ್ತು ಸಾಮಾಜಿಕ ಜಾಲತಾಣಗಳ ನಡುವೆಯೂ ಪುಸ್ತಕ ಓದುವ ಸಂಸ್ಕೃತಿಯನ್ನು ಜೀವಂತವಾಗಿಡಲು ಬಂಟ್ವಾಳದ ಆಟೋರಿಕ್ಷಾ ಚಾಲಕರೊಬ್ಬರು ವಿಶಿಷ್ಟ ಪ್ರಯತ್ನಕ್ಕೆ ಮುಂದಾಗಿದ್ದಾರೆ.

ಸಾಮಾನ್ಯವಾಗಿ ಪ್ರಯಾಣಿಕರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯುವ ಆಟೋರಿಕ್ಷಾವನ್ನೇ ಅವರು ಜ್ಞಾನದ ವಾಹನವನ್ನಾಗಿ ಪರಿವರ್ತಿಸಿದ್ದು, ಇದೀಗ ಅವರ ಆಟೋ ಮಿನಿ ಗ್ರಂಥಾಲಯವಾಗಿ ಸಾರ್ವಜನಿಕರ ಗಮನ ಸೆಳೆಯುತ್ತಿದೆ.

**ಆಟೋದಲ್ಲಿದೆ ಮಿನಿ ಲೈಬ್ರರಿ:** ಬಂಟ್ವಾಳದ ಬಿ.ಸಿ.ರೋಡ್‌ನ ಅಜ್ಜಿಬೆಟ್ಟು ನಿವಾಸಿ ಸುಶಾನ್ ಅವರ ಆಟೋರಿಕ್ಷಾ ವಿಭಿನ್ನ ಪರಿಕಲ್ಪನೆಯಿಂದ ಗುರುತಿಸಿಕೊಂಡಿದೆ. ಮಕ್ಕಳ ಕಥೆ ಪುಸ್ತಕಗಳು, ಕಾದಂಬರಿಗಳು, ದೇಶಭಕ್ತಿ ಗೀತೆಗಳ ಸಂಕಲನ, ಸಾಮಾನ್ಯ ಜ್ಞಾನ ಕೃತಿಗಳು, ದಾರ್ಶನಿಕರು ಹಾಗೂ ಚಿಂತಕರ ಸ್ಫೂರ್ತಿದಾಯಕ ಬರಹಗಳು ಸೇರಿದಂತೆ ಹಲವು ಪುಸ್ತಕಗಳನ್ನು ಅವರು ತಮ್ಮ ಆಟೋರಿಕ್ಷಾದಲ್ಲೇ ಜೋಡಿಸಿದ್ದಾರೆ.

ಪ್ರಯಾಣಿಕರು ಪ್ರಯಾಣದ ವೇಳೆ ಪುಸ್ತಕಗಳನ್ನು ಓದಬಹುದು. ಆಸಕ್ತಿ ಇದ್ದರೆ ಮನೆಗೆ ಕೊಂಡೊಯ್ದು ಓದಿ ಬಳಿಕ ಹಿಂದಿರುಗಿಸುವ ವ್ಯವಸ್ಥೆಯನ್ನೂ ಅವರು ರೂಪಿಸಿದ್ದಾರೆ. ಗೋಡೆಚಿತ್ರ ಕಲಾವಿದರೂ ಆಗಿರುವ ಸುಶಾನ್, ಶಾಲೆಗಳು, ಪಂಚಾಯತ್ ಕಟ್ಟಡಗಳು ಸೇರಿದಂತೆ ವಿವಿಧ ಕಡೆಗಳಲ್ಲಿ ಚಿತ್ರಕಲೆ ಮತ್ತು ಅಲಂಕಾರಿಕ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕ್ಯಾಟರಿಂಗ್ ಸೇರಿದಂತೆ ವಿವಿಧ ವೃತ್ತಿಗಳಲ್ಲೂ ಸಕ್ರಿಯರಾಗಿರುವ ಅವರು, ಸಮಾಜದಲ್ಲಿ ಓದುವ ಹವ್ಯಾಸವನ್ನು ಬೆಳೆಸುವ ಉದ್ದೇಶದಿಂದ ಈ ವಿನೂತನ ಪ್ರಯೋಗಕ್ಕೆ ಚಾಲನೆ ನೀಡಿದ್ದಾರೆ.

## ಈಡಿಗ ಸಮುದಾಯದ ಶಾಸಕ ಹೆಚ್.ಆರ್.ಗವಿಯಪ್ಪಗೆ ಸಚಿವ ಸ್ಥಾನ ನೀಡಲು ಒತ್ತಾಯ

• **ಉದಯವಾಹಿನಿ, ಹೊಸಪೇಟೆ.**

ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಈಡಿಗ ಸಮುದಾಯಕ್ಕೆ ಸೇರಿದ ಸ್ಥಳೀಯ ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಆರ್. ಗವಿಯಪ್ಪ ಅವರಿಗೆ ಸಚಿವ ಸ್ಥಾನ ನೀಡುವಂತೆ ಯೂತ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ರವಿಕುಮಾರ್, ಒತ್ತಾಯಿಸಿದರು.

ಸ್ಥಳೀಯ ಪತ್ರಿಕಾ ಭವನದಲ್ಲಿಂದು ಜರುಗಿದ ಪತ್ರಿಕಾ ಗೋಷ್ಠೀಯಲ್ಲಿ ಮಾತನಾಡಿದ ಅವರು. ಶಾಸಕ ಎಚ್. ಆರ್. ಗವಿಯಪ್ಪ ಅವರು ಜಿಲ್ಲೆಯ ಎಲ್ಲಾ ಸಮಾಜಗಳನ್ನು ಒಗ್ಗೂಡಿಸಿ ಕೊಂಡೊಯ್ಯುವ ಸಮರ್ಥ ನಾಯಕರಾಗಿದ್ದಾರೆ. ಅವರಿಗೆ ನೂತನ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡುವುದರಿಂದ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಆದ್ದರಿಂದ ಹೈಕಮಾಂಡ್ ತಕ್ಷಣವೇ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.



ಉದಯವಾಹಿನಿ ಚಿತ್ರ

ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಅಧ್ಯಕ್ಷ ಸೋಮಶೇಖರ್ ಬಣ್ಣದಮನೆ ಮಾತನಾಡಿ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ದೇಶದ ಮಾಜಿ ಪ್ರಧಾನಿ ಇಂದಿರಾಗಾಂಧಿಯವರು ಇಲ್ಲಿ ಗವಿಯಪ್ಪ ಅವರ ಮನೆಯಲ್ಲಿ ಹತ್ತು ದಿನಗಳ ಕಾಲ ಉಳಿದುಕೊಂಡಿದ್ದರು. ಗಾಂಧಿ ಕುಟುಂಬ ಹಾಗೂ ಹೆಚ್. ಆರ್.ಜಿ ಕುಟುಂಬದ ನಡುವೆ ಉತ್ತಮ ಬಾಂಧವ್ಯವಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಡಿಗ ಸಮುದಾಯದವರನ್ನು ರಾಜಕೀಯವಾಗಿ ಗುರುತಿಸಬೇಕು. ಸಚಿವ ಸ್ಥಾನ ನೀಡುವ ಮೂಲಕ ಸಮುದಾಯಕ್ಕೆ ನ್ಯಾಯ ಒದಗಿಸಬೇಕು. 1952ರಲ್ಲಿ ಮಾಜಿ ಶಾಸಕ ನಾಗನಗೌಡರು ಸಚಿವರಾಗಿದ್ದು ಬಿಟ್ಟರೆ, ಈ ವರೆಗೆ ಕಾಂಗ್ರೆಸ್ ನಿಂದ ಇಲ್ಲಿ ಸಚಿವರಾಗಿಲ್ಲ. ಆದ್ದರಿಂದ ಅನುಭವಿ ಶಾಸಕ ಹೆಚ್.ಆರ್.ಗವಿಯಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

# ಡೀಲರ್–ರಿಟೇಲರ್‌ಗಳೊಂದಿಗೆ ಹೆಚ್ಚಿನ ದರಕ್ಕೆ ಮಾರಾಟ ಮಾಡಿದರೆ ಪರವಾನಿಗೆ ರದ್ದು

**ರಸಗೊಬ್ಬರ ಸಮಸ್ಯೆ ಕುರಿತು ರೈತರ ಅಹವಾಲು ಆಲಿಸಲು ಕೂಡಲೆ ಸಹಾಯವಾಣಿ ಸ್ಥಾಪಿಸಬೇಕು .ಒಂದು ರೂಪಾಯಿ ಸಹ ಅನ್ನದಾತರ ಬಳಿ ಅಂಗಡಿಯವರು ಪಡೆದರೆ ಹುಷಾರ್**

• **ಉದಯವಾಹಿನಿ, ಕಲಬುರಗಿ,:**

ನಿಗದಿತ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡಿದಲ್ಲಿ ಅಂತಹ ರಸಗೊಬ್ಬರ ಅಂಗಡಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಲ್ಲದೆ ಅಂತಹ ಕೃಷಿ ಪರಿಕರ ಮಾರಾಟ ಅಂಗಡಿಗಳ ಪರವಾನಿಗೆ ಸಹ ರದ್ದುಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ತಿಳಿಸಿದರು. ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ರಸಗೊಬ್ಬರ ಅಂಗಡಿಗಳ ಡೀಲರ್–ರಿಟೇಲರ್ ಹಾಗೂ ಕೃಷಿ ಇಲಾಖೆ ಅಧಿಕಾರಿಗಳ ತುರ್ತು ಸಭೆ ಕರೆದ ಅವರು ಅಲ್ಲಲ್ಲಿ ರಸಗೊಬ್ಬರ ಹೆಚ್ಚಿನ ಮಾರಾಟಕ್ಕೆ ಮಾಡಲಾಗುತ್ತಿದೆ ಎಂದು ರೈತರಿಂದ ದೂರು ಬರುತ್ತಿವೆ, ಇದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಡಿ.ಎ.ಪಿ. 50 ಕೆ.ಜಿ. ಬ್ಯಾಗಿಗೆ 1,350 ರೂ., ಯೂರಿಯಾ 45 ಕೆ.ಜಿ. ಬ್ಯಾಗಿಗೆ 266 ರೂ. ಎಂ.ಆರ್.ಪಿ. ದರವಿದ್ದು, ಇದಕ್ಕಿಂತ ಒಂದು ರೂಪಾಯಿ ಸಹ ಅನ್ನದಾತರ ಬಳಿ ಅಂಗಡಿಯವರು ಪಡೆದರೆ ಹುಷಾರ್ ಎಂದು ಎಚ್ಚರಿಕೆ ನೀಡಿದರು. ಜಿಲ್ಲೆಯಲ್ಲಿ ರಸಗೊಬ್ಬರ ಹೆಚ್ಚಿನ ದರಕ್ಕೆ ಮಾರಾಟದ ಹಾವಳಿ ತಡೆಯಲು ಕೂಡಲೆ ತಾಲ್ಲೂಕಿಗೊಂದು ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ತಂಡ ರಚಿಸಬೇಕು. ಎ.ಸಿ., ತಹಶೀಲ್ದಾರ, ಕೃಷಿ, ತೋಟಗಾರಿಕೆ ಎಲ್ಲಾ ಅಧಿಕಾರಿಗಳು ಹೋಬಳಿ, ತಾಲ್ಲೂಕಿಗೆ ಹೋಗಿ ಪ್ರತಿನಿತ್ಯ ಸುಮಾರು 25 ರಸಗೊಬ್ಬರ ಅಂಗಡಿಗೆ ಭೇಟಿ ನೀಡಿ ತಪಾಸಣೆ ಮಾಡಬೇಕು. ಪಿ.ಓ.ಎಸ್, ದಾಸ್ತಾನು ಪರಿಶೀಲಿಸಬೇಕು ಎಂದರು.



ಉದಯವಾಹಿನಿ ಚಿತ್ರ

ರಸಗೊಬ್ಬರ ಸಮಸ್ಯೆ ಕುರಿತು ರೈತರ ಅಹವಾಲು ಆಲಿಸಲು ಕೂಡಲೆ ಸಹಾಯವಾಣಿ ಸ್ಥಾಪಿಸಬೇಕು. ಪ್ರಸ್ತುತ ಬೇಡಿಕೆ ಅನುಗುಣವಾಗಿ ಡಿ.ಎ.ಪಿ. ಸೇರಿ ಇತರೆ ರಸಗೊಬ್ಬರಗಳನ್ನು ತಾಲ್ಲೂಕಿಗೆ ಮರು ಹಂಚಿಕೆ ಮಾಡಬೇಕು. ಪ್ರತಿನಿತ್ಯ ಪಿ.ಓ.ಎಸ್., ಸ್ಟಾಕ್ ಅಪಡೇಟ್ ಮಾಡುವಂತೆ ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಮತ್ತು ಪ್ರತಿ ದಿನದ ವರದಿ ತಮಗೆ ಸಲ್ಲಿಸುವಂತೆ ಜಂಟಿ ಕೃಷಿ ನಿದೇಶಕರಿಗೆ ಡಿ.ಸಿ. ಸೂಚಿಸಿದರು. ರಿಟೇಲರ್‌ಗಳು ರೈತರಿಗೆ ಹೊಸ ತಂತ್ರಜ್ಞಾನದ ನ್ಯಾನೋ ಯೂರಿಯಾ, ನ್ಯಾನೋ ಡಿ.ಎ.ಪಿ. ರಸಗೊಬ್ಬರ ತೆಗೆದುಕೊಂಡರೆ ಮಾತ್ರ ಡಿ.ಎ.ಪಿ. ನೀಡುತ್ತೇವೆ ಎನ್ನುವುದು ಸಮಂಜಸವಲ್ಲ. ಈ ರೀತಿ ರೈತರಿಗೆ ಯಾವುದೇ ಅಂಗಡಿವರು ಇಂತಹದೆ ರಸಗೊಬ್ಬರ ಪಡೆಯುವಂತೆ ಒತ್ತಾಯ ಮಾಡುವಂತಿಲ್ಲ.

ರಸಗೊಬ್ಬರ ಹೆಚ್ಚಿನ ದರಕ್ಕೆ ಮಾರಾಟ ಮಾಡಲಾಗುತ್ತದೆ ಎಂದು ಯಾವುದೇ ಮೂಲೆದಿಂದ ರೈತರೊಬ್ಬರ ದೂರು ಹೊತ್ತಿಕೊಂಡು ಡಿ.ಸಿ. ಕಚೇರಿಗೆ ಬರಬೇಕಾ ನಿಮಗೆ ಮಾಹಿತಿ ಇಲ್ವಾ ಎಂದು ತೀವ್ರ ಅಸಮಾಧಾನದಿಂದಲೆ ಕೃಷಿ ಅಧಿಕಾರಿಗಳನ್ನು ಪ್ರಶ್ನಿಸಿದ ಡಿ.ಸಿ. ಅವರು ಮತ್ತೆ ರೈತರಿಂದ ದೂರು ಬಂದಲ್ಲಿ ಡೀಲರ್–ರಿಟೇಲರ್ ಜೊತೆ ಅಧಿಕಾರಿಗಳ ಮೇಲೆಯೂ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

> ಅಧಿಕಾರಿಗಳು ಇನ್ಮುಂದೆ ಕಚೇರಿಯಲ್ಲಿ ಕೂಡದೆ ಹಳ್ಳಿ, ಹೋಬಳಿಗೆ ಭೇಟಿ ನೀಡಬೇಕು. ನೀವು ಕ್ಷೇತ್ರಕ್ಕೆ ಭೇಟಿ ನೀಡಿದರೆ ಈ ಸಮಸ್ಯೆ ತಲೆದೋರದು. ಕಚೇರಿಯಲ್ಲಿ ಕುಳಿತುಕೊಳ್ಳದೆ ರೈತರ ಬಳಿಗೆ ಹೋಗಿ ಅವರ ಅಹವಾಲು ಆಲಿಸಬೇಕು. ಡೀಲರ್, ರಿಟೇಲರ್ ಗಳು ಸಮಸ್ಯೆ ಅನುಭವಿಸುತ್ತಿದಲ್ಲಿ ಅದರ ನಿವಾರಣೆಗೂ ಪ್ರಯತ್ನಿಸಬೇಕು. ಪ್ರತಿನಿತ್ಯ ಭೇಟಿ, ತಪಾಸಣೆ ಕುರಿತು ಜಿಯೋ ಟ್ಯಾಗ್ ಫೋಟೊ, ವರದಿ ಸಲ್ಲಿಸಬೇಕು ಎಂದೂ ಕೃಷಿ ಅಧಿಕಾರಿಗಳಿಗೆ ಡಿ.ಸಿ. ಖಡಕ್ ಸೂಚನೆ ನೀಡಿದರು.
> –ಜಿಲ್ಲಾಧಿಕಾರಿ ಇಕ್ರಮ್ ಶರೀಫ್

> ಕಳೆದ 15 ದಿನದಲ್ಲಿ 117 ಕಡೆ ಕೃಷಿ ಅಧಿಕಾರಿಗಳ ತಂಡ ರಸಗೊಬ್ಬರ ಅಂಗಡಿಗಳ ಮೇಲೆ ದಾಳಿ ಮಾಡಲಾಗಿದ್ದು, ಸುಮಾರು 51 ಅಂಗಡಿಗಳು ನಿಯಮ ಉಲ್ಲಂಘಿಸಿ ಮಾರಾಟ ಮಾಡುತ್ತಿರುವುದು ಕಂಡುಬಂದಿರುವುದರಿಂದ ನೋಟಿಸ್ ಜಾರಿ ಮಾಡಲಾಗಿದೆ. ಅಲ್ಲದೆ 66.27 ಲಕ್ಷ ರೂ. ಮೊತ್ತದ ರಸಗೊಬ್ಬರ ಮಾರಾಟ ಮಾಡದಂತೆ ತಡೆ ಆದೇಶ ಸಹ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.
> –ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್